
# ಜ್ಞಾನಶಕ್ತಿ
ಮಾಸ ಪತ್ರಿಕೆ
JNANASHAKTHI



ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು - 575 003

Postal Regd. No. MNG / 1023 / 2021-23
Date of Posting, Kodialbail Post Office
on 12th of every Month

ಸಂಪುಟ - 12 Reg. No. : KARBIL / 2005 / 16123 ಎಪ್ರಿಲ್ - 2023 ಪುಟ : 8 ದರ ₹ 3-00 ವಾರ್ಷಿಕ ಚಂದಾ ₹ 30-00 ಸಂಚಿಕೆ : 04 ಪ್ರಕಟಣೆ : 30-04-2023

## ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ 'ಶಂಕರ ಜಯಂತಿ' ಆಚರಣೆ



ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ತಾ. 22-4-2023ನೇ ಶನಿವಾರ ಸಂಜೆ 'ಶಂಕರ ಜಯಂತಿ'ಯನ್ನು ಶ್ರದ್ಧೆ ಹಾಗೂ ಭಕ್ತಿಪೂರ್ವಕವಾಗಿ ಆಚರಿಸಲಾಯಿತು. ದುರ್ಗಾಪೂಜೆಯ ಸಂಕಲ್ಪದ ಬಳಿಕ ಶಂಕರ ಅಷ್ಟೋತ್ತರ, ಲಲಿತ ಸಹಸ್ರ ನಾಮಾವಳಿ ಪಾರಾಯಣ, ಗುರುದೇವತಾ ಭಜನಾ ಕಾರ್ಯಕ್ರಮಗಳು ನಡೆದವು. ಶ್ರೀ ಸುಬ್ರಹ್ಮಣ್ಯ ಭಟ್ ಪಾವಂಜೆ, ಶ್ರೀ ಪುಷ್ಪರಾಜ್ ಭಟ್ ಪೌರೋಹಿತ್ಯದಲ್ಲಿ ಶ್ರೀ ಶ್ರೀನಿವಾಸ್ ರಾವ್ ಮತ್ತು ಶ್ರೀಮತಿ ಪುಷ್ಪಾವತಿ ದಂಪತಿಗಳು ಪೂಜೆಯ ಯಜಮಾನರಾಗಿ ಭಾಗವಹಿಸಿದರು. ಶ್ರೀ ರವಿಶಂಕರ್ ರಾವ್, ಪ್ರಾಧ್ಯಾಪಕರು, ಹರೇಕಳ, ಶ್ರೀ ರಾಮಕೃಷ್ಣ ಪ್ರೌಢಶಾಲೆ ಶಂಕರ ಭಗವತ್ಪಾದರ ಬಗ್ಗೆ ಧಾರ್ಮಿಕ ಉಪನ್ಯಾಸ ನೀಡಿ, ತಾವೇ ರಚಿಸಿದ ಶಂಕರಾಚಾರ್ಯರ ಭಕ್ತಿಗೀತೆಯನ್ನು ಸುಶ್ರಾವ್ಯವಾಗಿ ಹಾಡಿದರು. ಇದೇ ಸಂದರ್ಭ ಶ್ರೀ ಸಭಾ ಮಹಿಳಾ ವೇದಿಕೆ ವತಿಯಿಂದ ಜ಼ೀ ಕನ್ನಡ ಸರಿಗಮಪ ದ್ವಿತೀಯ ರನ್ನರ್ ಅಪ್ ಕು। ತನುಶ್ರೀಯವರನ್ನು ಸಂಮಾನಿಸಲಾಯಿತು. ಈ ಸಂದರ್ಭ ಅವರ ಹೆತ್ತವರಾದ ಶ್ರೀ ಉದಯ್ ಅಡೂರ್ ಮತ್ತು ಶ್ರೀಮತಿ ಸಂಧ್ಯಾ ಉಪಸ್ಥಿತರಿದ್ದರು. ಕು। ತನುಶ್ರೀ ಎರಡು ಭಕ್ತಿಗೀತೆಗಳನ್ನು ಹಾಡಿ ಎಲ್ಲರನ್ನೂ ಮಂತ್ರಮುಗ್ಧರನ್ನಾಗಿಸಿದಳು.



ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ಹಲವಾರು ವರ್ಷಗಳಿಂದ ಸೇವೆ ಸಲ್ಲಿಸುತ್ತಿರುವ ಶ್ರೀ ಎ. ಪಿ. ಉಮಾಕಾಂತ್ ಶರ್ಮ ಮತ್ತು ಶ್ರೀ ಪಿ. ಮೋಹನದಾಸ್ ರಾವ್ ಇವರನ್ನು ಸನ್ಮಾನಿಸಲಾಯಿತು. ಶ್ರೀ ಸಭಾದ ಅಧ್ಯಕ್ಷ ಶ್ರೀ ಹರ್ಷಕುಮಾರ್ ಕೆ., ಉಪಾಧ್ಯಕ್ಷರಾದ ಡಾ. ಎ. ಪಿ. ಕೃಷ್ಣ, ಶ್ರೀಮತಿ ಸುಮಂಗಲಾ ಪ್ರಭಾಕರ್, ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆ, ಜೊತೆ ಕಾರ್ಯದರ್ಶಿ ಶ್ರೀ ಚೇತನ್ ಶರ್ಮ ಉಪಸ್ಥಿತರಿದ್ದರು. ಮಹಿಳಾ ವೇದಿಕೆ ಅಧ್ಯಕ್ಷೆ ಶ್ರೀಮತಿ ಕುಸುಮಾ ನವೀನ್, ಯುವವೇದಿಕೆ ಅಧ್ಯಕ್ಷ ಶ್ರೀ ಅನಿಲ್ ನೆಲ್ಲಿಕುಂಜೆ, ಶ್ರೀ ಸುರೇಶ್ ಕಡಬ, ಶ್ರೀ ಸಾಯಿಪ್ರಸಾದ್ ಕಾರ್ಯಕ್ರಮ ಸಂಘಟಿಸಿದರೆ, ಶ್ರೀ ಸಭಾ ಕೋಶಾಧಿಕಾರಿ ಶ್ರೀ ಪಿ. ಶ್ರೀಕಾಂತ್ ರಾವ್ ನಿರೂಪಿಸಿದರು. ಮಂಗಳಾರತಿ, ಪ್ರಸಾದ ಭೋಜನದೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.







ಚಿತ್ರ : ಶ್ರೀ ರಘುವೀರ್ ಪೆರ್ಡೂರ್



### ಅಭಿನಂದನೆಗಳು

ಕು। ತನುಶ್ರೀ ಈ ಬಾರಿಯ ಪಿ.ಯು.ಸಿ. ಪರೀಕ್ಷೆಯಲ್ಲಿ ಶೇ. 99 (594 / 600) ಅಂಕಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾಳೆ. ಇವಳು ರಾಜ್ಯಕ್ಕೆ 4ನೇ ರ್‍ಯಾಂಕ್ ಗಳಿಸಿದ್ದಾಳೆ. ಇವಳು ಶ್ರೀ ಅನಂತ ಉಬರಳೆ ಮತ್ತು ಶ್ರೀಮತಿ ಪ್ರತಿಮಾ ಎಲ್ಲೂರು ಇವರ ಸುಪುತ್ರಿ ಹಾಗೂ ಮೂಡಬಿದಿರೆ ಆಳ್ವಾಸ್ ಕಾಲೇಜಿನ ವಿದ್ಯಾರ್ಥಿನಿ.

- ನಾನು ನರಕದಲ್ಲಿಯೂ ಸಹ ಒಳ್ಳೆಯ ಪುಸ್ತಕಗಳನ್ನು ಸ್ವಾಗತಿಸುವೆ. ಅವು ಇದ್ದಲ್ಲಿ ಸ್ವರ್ಗ ತಾನಾಗಿಯೇ ಹುಟ್ಟುತ್ತದೆ. – ರವೀಂದ್ರನಾಥ ಠಾಗೋರ್
- ಬೌದ್ಧಿಕ ಸೌಂದರ್ಯವು ನಿಜಕ್ಕೂ ಎಲ್ಲ ಬಗೆಯ ಸೌಂದರ್ಯಗಳಿಗೂ ಮಿಗಿಲಾದುದು. – ಸಿ. ವಿ. ರಾಮನ್

## ಜ್ಞಾನಶಕ್ತಿ ಮಾಸ ಪತ್ರಿಕೆ

ಪ್ರಧಾನ ಸಂಪಾದಕರು :
ಎಂ. ಎಸ್. ರಘುನಾಥ ರಾವ್ ಪುತ್ತೂರು
ಮೊಬೈಲ್ : 9448481696

ಸಂಪಾದಕರು :
ಪಿ. ಶ್ರೀಕಾಂತ ರಾವ್
ಮೊಬೈಲ್ : 9343361618

ಸಂಪಾದಕ ಮಂಡಳಿ :
• ನಾಗರಾಜ್ ವರ್ಕಾಡಿ • ರಘುವೀರ್ ಪೆರ್ಡೂರು
• ಟಿ. ಬಿ. ಮೋಹನ್ ರಾವ್ • ಸ್ವಾತಿ ಪ್ರಮೋದ್ ಕ್ಯಾದಿಗೆ

ಆರ್ಥಿಕ ಸಲಹಾ ಸಮಿತಿ :
• ಕರುಣ್ ರಾವ್ ಬೆಳ್ಳೆ
• ಅನಿಲ್ ರಾವ್ ಬಿ. ಎಸ್.

ಗೌರವ ಸಲಹೆಗಾರರು :
• ಚೇತನ್ ಶರ್ಮ
• ಶ್ರೀಮತಿ ಅರುಣಾ ಸೋಮಶೇಖರ್

ಪ್ರಕಾಶಕರು :
ಹರ್ಷಕುಮಾರ್ ಕೇದಿಗೆ

: 7795116598 : 9343361618
e-mail : jnanashakthisss@gmail.com


## ಪುತ್ತೂರಿನ ‘ಶಿವಸದನ’ಕ್ಕೆ ದಾನಿಗಳಿಂದ ಸಹಾಯಹಸ್ತ

*‘ಶಿವಸದನ’ ವಸತಿ ನಿಲಯವು ಸಮಾಜ ಬಾಂಧವರ ಸಹಕಾರದಿಂದ ಯಶಸ್ವಿಯಾಗಿ ನಡೆಯುತ್ತಿದ್ದು, ದಾನಿಗಳ ಉದಾರ ದೇಣಿಗೆಯನ್ನು ನಿರೀಕ್ಷಿಸುತ್ತಿದ್ದೇವೆ. ದಾನಿಗಳು ವಸ್ತುರೂಪದಲ್ಲೂ ದೇಣಿಗೆ ನೀಡಬಹುದು. ಹಿರಿಯ ನಾಗರಿಕರ ಸಸ್ಯಾಹಾರಿ ವಸತಿ ನಿಲಯದಲ್ಲಿ ಈಗಾಗಲೇ 36ಕ್ಕೂ ಹೆಚ್ಚು ನಿವಾಸಿಗಳಿದ್ದು, ಮಿತದರದಲ್ಲಿ ಎಲ್ಲಾ ಸಸ್ಯಾಹಾರಿಗಳಿಗೆ ಮುಕ್ತವಾಗಿರುತ್ತದೆ. ಅಪೇಕ್ಷಿತರಿಗೆ ಮಾಹಿತಿ ನೀಡಿ ಸಹಕರಿಸಿ.*

ಶ್ರೀ ಕರುಣ್ ರಾವ್ ಬೆಳ್ಳೆ – **7337634359**
ಶ್ರೀ ಪಿ. ಶ್ರೀಕಾಂತ್ ರಾವ್ – **7795116598**


ಪತ್ರಿಕೆಗೆ ಶುಭ ಬಯಸುವ–
**ಡಾ. ದಿವಾಕರ್ ರಾವ್** ಹಾಗೂ
**ಶ್ರೀಮತಿ ಸ್ನೇಹಲತಾ ಮತ್ತು ಕುಟುಂಬ**
ಮೌರಿಷ್ಕ ಪ್ಯಾಲೇಸ್, ಸಿ. ವಿ. ನಾಯಕ್ ಹಾಲ್ ಬಳಿ
ಕದ್ರಿ, ಮಂಗಳೂರು - 575 003

**ರಾಮಾ ಅಟೋಮೊಬೈಲ್ಸ್**

ಮಾರುತಿ ವಾಹನ ತಜ್ಞರು

ಮಾಲೆಮಾರ್ ರಸ್ತೆ, ಕೊಟ್ಟಾರ ಚೌಕಿ, ಮಂಗಳೂರು - 575 006
ಫೋನ್ : 0824 - 2454355, ಮೊಬೈಲ್ : 9448545702
ಪ್ರೊ. : ಯು. ಸಂತೋಷ ಕುಮಾರ್, ಉಜ್ಜೋಡಿ


**PRAMOD**
**AUTOMOBILES**
30 Years of Service
KARANGALPADY
MANGALORE- 575 003
Ph. : 2493633 (O)
2212723 (R)
M. : 9448260225
Wholesale & Retail Dealers in
2 & 3 WHEELERS SPARES & ACCESSORIES
Prop. : Ln. K. HARSHA KUMAR


# ಮರ್ಯಾದಾ ಪುರುಷೋತ್ತಮ ಶ್ರೀರಾಮಚಂದ್ರ

ಶ್ರೀರಾಮನ ವ್ಯಕ್ತಿತ್ವ ಕಾಲ ಕಾಲಕ್ಕೂ ಪ್ರಸ್ತುತ. ಮನುಷ್ಯನೊಬ್ಬ ದೇವನಾಗುವ ಪ್ರಕ್ರಿಯೆಯಂತೆ ಕಡೆದು ನಿಂತ ಆತನ ಬದುಕು ಸಾರ್ವಕಾಲಿಕ ಆದರ್ಶ. ಶ್ರೀರಾಮನ ಕುರಿತು ಯಾರು ಏನೇ ಹೇಳಿದರೂ ಸಜ್ಜನಿಕೆಗೆ ಆತನೇ ಮಾದರಿ. ಆತನೇ ಮರ್ಯಾದಾ ಪುರುಷೋತ್ತಮ.


**ಮರ್ಯಾದಾ ಪುರುಷೋತ್ತಮ ಶ್ರೀರಾಮಚಂದ್ರ**

ಶ್ರೀರಾಮನ ನಾಮಮಹಾತ್ಮೆ ವಿಶಿಷ್ಟವಾದುದು. ಶ್ರೀರಾಮ ರಹಸ್ಯದ ಕೊನೆಯ ಪಾದದಲ್ಲಿ ‘ರಾಮ’ ಎಂಬ ಎರಡಕ್ಷರದ ಅರ್ಥ ಹೀಗಿದೆ – ನಾರಾಯಣಾಷ್ಟಕ್ಷರದಲ್ಲಿ ‘ರಾ’, ಶಿವಪಂಚಾಕ್ಷರಿಯಲ್ಲಿದ್ದ ‘ಮ’ ಸೇರಿ ‘ರಾಮ’ ಎಂಬ ನಾಮವಾಗಿದೆ.

ಬಹಳ ಜನರು ನಾಮಕ್ಕೂ ರೂಪಕ್ಕೂ ಏನು ವ್ಯತ್ಯಾಸ ಎಂದು ಕೇಳುತ್ತಾರೆ. ಅದಕ್ಕೆ ಉತ್ತರ ರೂಪ ಕಣ್ಣಿಗೆ ಕಾಣುತ್ತದೆ. ಮನಸ್ಸು ಅದರಲ್ಲಿ ಲೀನವಾಗಿ ಬಿಡುವುದಿಲ್ಲ, ಬದಲಾಗಿ ತರ್ಕಕ್ಕೆ ನಿಲ್ಲುತ್ತದೆ. ವೇದಗಳ ಅರಿವು ಕೂಡ ಹಾಗೆ ಜ್ಞಾನದ ಮೂಲಕ ತರ್ಕಕ್ಕೆ ನಿಲ್ಲುತ್ತವೆ. ಆದರೆ ನಾಮ ಹಾಗಲ್ಲ. ನೇರವಾಗಿ ಮನಸ್ಸಿನೊಳಗೆ ಹೋಗುತ್ತದೆ. ಜತೆಗೆ ಸಕಲರಿಗೂ ನಿಲುಕುತ್ತದೆ. ಇದರ ಉಪದೇಶವನ್ನು ಸಾಧಕರಿಂದ ಪಡೆಯಬೇಕು. ನಾಮದಲ್ಲಿಯೇ ನಿಲ್ಲುವುದು ಸಾಧ್ಯವಾದರೆ ಚಿತ್ತ ನಿರ್ಮಲವಾಗುತ್ತಾ ಬರುತ್ತದೆ. ಇದನ್ನು ಎಷ್ಟು ಸಲ ಜಪಿಸಬೇಕು, ಹೇಗೆ ಮಂಗಳವನ್ನು ಮಾಡಬೇಕು ಎಂಬ ಕ್ರಮವಿಲ್ಲ. ಪ್ರತಿಯೊಬ್ಬರು ಸಾಧ್ಯವಾದಷ್ಟು ರಾಮನಾಮವನ್ನು ಜಪಿಸಬೇಕು. ಅದು ಕಂಠದಲ್ಲಿ ನಿಲ್ಲದೆ ಮನಸ್ಸಿನೊಳಗೆ ಇಳಿಯಬೇಕು. ದೇಹದ ಕಣಕಣಗಳಲ್ಲೂ ಮಿಡಿಯಬೇಕು. ಆಗ ನಾಮಸಂಕೀರ್ತನೆ ಸಾರ್ಥಕವಾಗುತ್ತದೆ. ಇದಕ್ಕೆ ಸರಿಯಾದ ವ್ಯಕ್ತಿ ಆಂಜನೇಯ. ಈತನಿಗೆ ರಾಮನಾಮ ಬಿಟ್ಟು ಏನೂ ತಿಳಿದಿರಲಿಲ್ಲ. ಈತ ನಿರಂತರ ರಾಮ ಜಪದಲ್ಲಿಯೇ ಜೀವನ ಕಳೆದ. ರೂಪ ಮೊದಲೋ ನಾಮವೇ ಮೊದಲೋ ಎಂಬ ತರ್ಕವನ್ನು ಮಾಡುವವರಿದ್ದಾರೆ. ನಮ್ಮ ಮಟ್ಟಿಗೆ ನಾಮವೇ ಮೊದಲು. ಇಡೀ ಜಗತ್ತು ಹುಟ್ಟಿದ್ದು ನಾಮದಿಂದ. ಅದು ‘ಓಂ’ಕಾರ. ರಾಮನಾಮವೂ ಅದರಿಂದಲೇ ರೂಪ ತಳೆದಿದೆ. ರೂಪಕ್ಕೆ ಭೇದವಿಲ್ಲ. ನಾಮಕ್ಕೆ ಭೇದವಿಲ್ಲ. ಅದು ಎಲ್ಲ ಧರ್ಮದವರಿಗೂ ಎಲ್ಲ ಭಾಗದವರಿಗೂ ಲಭಿಸುವ ತವನಿಧಿ. ನಾಮಕ್ಕೆ ಋಷಿ ಛಂದಸ್ಸನ್ನು ಏಕೆ ಹೇಳುವುದಿಲ್ಲ ಎಂದು ಕೆಲವರು ಕೇಳುತ್ತಾರೆ, ನಾಮವು ಮಾನವ ರೂಪಿತ ಅಲ್ಲ, ತರ್ಕಕ್ಕೆ ನಿಲುಕುವಂತಹದಲ್ಲ, ಅದನ್ನು ಅನುಭವದಿಂದಲೇ ಕಂಡುಕೊಳ್ಳಬೇಕಾದದ್ದು.

‘ರಾಮು–ಕ್ರೀಡಾಯಾಂ’ ಎಂಬ ಧಾತುವಿನಿಂದ ‘ರಾಮ’ ಶಬ್ದ ನಿಷ್ಪನ್ನವಾಗಿದೆ. ‘ರಮಂತೇ ಯೋಗಿನಃ ಅಸ್ಮಿನ್ ಇತಿ ರಾಮ’ ಎಂದರೆ ಯೋಗಿಗಳು ರಾಮನಾಮ ಧ್ಯಾನದಲ್ಲಿ ಮಗ್ನರಾಗಿ ಸಮಾಧಿ ಸ್ಥಿತರಾಗಿ ಕ್ರೀಡಿಸುತ್ತಾರೆ ಎಂದು ‘ರಾಮೋ ರಮಯತಾಂ ವರಃ’ ಎಂಬಂತೆ ಆನಂದ ನೀಡುವ ನಾಮಗಳಲ್ಲಿ ರಾಮನಾಮವೇ ಶ್ರೇಷ್ಠವಾಗಿದೆ.

ಒಮ್ಮೆ ಪಾರ್ವತಿ ದೇವಿಯು ಶ್ರೀರಾಮನಾಮದ ಸ್ವಾರಸ್ಯವನ್ನು ತಿಳಿಸಲು ಶಿವನಲ್ಲಿ ಈ ರೀತಿ ಕೇಳುತ್ತಾಳೆ. ‘ಕೇನೋ ಪಾಯೇನ ಲಘುನಾ’, ‘ವಿಷ್ಣೋರ್ನಾಮ ಸಹಸ್ರಕಮ್’ ಎಂದು ‘ಪಠತ್ಯೇ ಪಂಡಿತೈರ್ನಿತ್ಯಂ ಶ್ರೋತುಮಿಚ್ಛಾಮ್ಯಹಂ ಪ್ರಭೋ’ ಎಂದು ಹೇಳುತ್ತಾಳೆ. ಅದಕ್ಕೆ ಶಿವನು ‘ಶ್ರೀರಾಮ ರಾಮ ರಾಮೇತಿ ರಮೇ ರಾಮೇ ಮನೋರಮೇ, ಸಹಸ್ರನಾಮ ತತ್ತುಲ್ಯಂ ರಾಮನಾಮ ವರಾನನೇ’ ಎಂದು ಹೇಳುತ್ತಾನೆ. ಅಂದರೆ ಶ್ರೀ ರಾಮ ರಾಮ ರಾಮ ಎಂದು ಜಪಿಸಿದರೂ ಶ್ರೀವಿಷ್ಣು ಸಹಸ್ರನಾಮ ಪಠನೆ ಮಾಡಿದ ಫಲ ದೊರೆಯುತ್ತದೆ ಎಂದು ಇದರ ಒಳ ಅರ್ಥವಾಗಿದೆ.



ಶ್ರೀರಾಮನಾಮವೇ ಜಗತ್ ಪ್ರಥಮ ಮಂಗಲವೆಂಬುದು ಕಾಳಿದಾಸನ ಆಶಯವಾಗಿದೆ. ಶ್ರೀಮದ್ ವಾಲ್ಮೀಕಿ ಮುನಿಗಳು ಶ್ರೀರಾಮನ ಆಯನವನ್ನು ಅನುಸರಿಸಿ ಬರೆದ ರಾಮಾಯಣ ಗ್ರಂಥವು ಜಗತ್ತಿನ ಪ್ರಥಮ ಕಾವ್ಯವಾಗಿ ಪ್ರಸಿದ್ಧಿಯಾಗಿದೆ ಮತ್ತು ಶ್ರೀರಾಮನಾಮವೇ ಆದಿ ಕಾವ್ಯಕ್ಕೆ ನಾಂದಿಯಾಯಿತು. ಶ್ರೀ ಶಂಕರಾಚಾರ್ಯರು ಶ್ರೀರಾಮನ ಸ್ತೋತ್ರಗಳಲ್ಲಿ ಶ್ರೀರಾಮನಾಮದ ಮಹಿಮೆಯನ್ನು ಬಹುವಿಧವಾಗಿ ಹೊಗಳಿದ್ದಾರೆ. ಕಾಶಿಯಲ್ಲಿರುವುದು ಅಂತ್ಯಕಾಲದಲ್ಲಿ ಚಿಂತೆಗೊಳಗಾಗಿದ್ದಾಗ ಶಿವನು ಯಾವ ರಾಮ ರಾಮ ರಾಮ ಎಂದು ಬೋಧಿಸುವ ಆ ಏಕಮಾತ್ರ ಶ್ರೇಷ್ಠತಾರಕ ಬ್ರಹ್ಮರೂಪವನ್ನು ನಾನು ಭಜಿಸುತ್ತೇನೆ. ಮಾನವನು ಅವಸಾನದ ಸಮಯದಲ್ಲಿ ಕಾಶಿಯಲ್ಲಿ ಶಿವನಿಂದ ರಾಮನಾಮ ಉಪದೇಶವನ್ನು ಹೊಂದಿದರೆ ಅವನು ಮುಕ್ತನಾಗುತ್ತಾನೆಂದು ಹೇಳಿದ್ದಾರೆ.

**ಅನುಕರಣೀಯ ವ್ಯಕ್ತಿ :** ಶ್ರೀರಾಮ ಮರ್ಯಾದಾ ಪುರುಷೋತ್ತಮ. ಅವನ ಜೀವನ ಎಂದರೆ ಸದ್ಗುಣಗಳ ಮೊತ್ತ. ಅವನು ಅಯೋಧ್ಯಾರಾಮ, ಕೋದಂಡರಾಮ, ದಶರಥರಾಮ, ರಾಜಾರಾಮ ಎಲ್ಲವೂ ಅವನೇ. ಅವನ ಆಡಳಿತ ಹೇಗಿರಬೇಕು ಎಂದು ತೋರಿಸಿಕೊಟ್ಟು ಮನುಷ್ಯ ಹೇಗೆ ಬದುಕಬೇಕು ಎಂಬುದಕ್ಕೆ ಮಾದರಿಯಾಗಿದೆ. ಹೀಗಾಗಿ, ಅವನು ಅಂದು ಮಾತ್ರವಲ್ಲ ಇಂದೂ ಮುಂದೆಯೂ ಅನುಕರಣೀಯ ವ್ಯಕ್ತಿ ಶ್ರೀರಾಮ. ಇಂಥ ವ್ಯಕ್ತಿ ಶ್ರೀರಾಮನ ಕುರಿತು ಹೇಳುವುದೆಂದರೆ ಸುಲಭದ ಮಾತಲ್ಲ. ಅರ್ಥ ಮಾಡಿಕೊಂಡಷ್ಟೂ ಬಹಳ ಇದೆ. ‘ರಾಮ’ ಎಂದರೆ ರಾಷ್ಟ್ರ, ಬದುಕು, ಆದರ್ಶ ಅಪ್ಪಟ ಮನುಷ್ಯ. ಮುಖ್ಯವಾಗಿ ಮನುಷ್ಯನೊಬ್ಬ ತಾನು ಬದುಕುವ ರೀತಿಯಿಂದಲೇ ದೇವರಾಗಲು ಸಾಧ್ಯ ಎಂದು ತೋರಿಸಿಕೊಟ್ಟವನು.

**ರಾಮರಾಜ್ಯ :** ಶ್ರೀರಾಮನೆಂದರೆ ರಾಷ್ಟ್ರ. ಅವನ ಆಡಳಿತ ಕಲ್ಪನೆಯೇ ನಾವಿಂದು ಕನಸು ಕಾಣಲೂ ಸಾಧ್ಯವಿರದ ರಾಮರಾಜ್ಯ. ರಾಮನೆಂದರೆ ವ್ಯವಸ್ಥೆ. ಒಂದು ಸಮಾಜದ ಬದುಕು ಹೇಗಿರಬೇಕು, ಶಿಷ್ಟರ ರಕ್ಷಣೆ, ದುಷ್ಟರ ಶಿಕ್ಷೆಯನ್ನು ಆಡಳಿತವೊಂದು ಹೇಗೆ ನಿಭಾಯಿಸಬೇಕು ಎಂಬುದಕ್ಕೆ ಮಾದರಿ. ರಾಮನೆಂದರೆ ಬದುಕು, ಭಾವನೆ ಹಾಗೂ ಕರ್ತವ್ಯದ ಸಂಘರ್ಷಗಳ ಮತ್ತು ಸದಾ ಪ್ರಕಾಶಿಸುವ ಬೆಳಕು. ಯಾವುದೇ ಸಂದರ್ಭದಲ್ಲಿ ಪ್ರಜೆಗಳ ಹಿತವನ್ನು ಬಯಸುವ ಆಡಳಿತಗಾರ ಹಾಗೂ ಹೀಗಿರಬೇಕು ಎನ್ನುವುದಕ್ಕೆ ಆತನೇ ಉದಾಹರಣೆ. *(ಸಾಧಾರ)*

## —— ಅಯೋಧ್ಯಾ ಶ್ರೀರಾಮಮಂದಿರ ——

***ಅಯೋಧ್ಯೆಯಲ್ಲಿ ಸ್ಥಾಪನೆಯಾಗಿರುವ ಬಾಲ ರಾಮನ ಮೂರ್ತಿ ಗರ್ಭಗೃಹದಲ್ಲಿ ಪ್ರತಿಷ್ಠಾಪಿಸುವ ರಾಮಲಲ್ಲಾನ ವಿಗ್ರಹ ನಿರ್ಮಾಣಕ್ಕೆ ನೇಪಾಳದ ಗಂಡಕಿ ನದಿ ತಟದಿಂದ 2 ಶಿಲೆ, ಕರ್ನಾಟಕದ ಕಾರ್ಕಳದ ಕೃಷ್ಣ ಶಿಲೆ, ರಾಜಸ್ತಾನದ ಶಿಲೆ ಸೇರಿ ಒಟ್ಟು 4 ಕಡೆಗಳಿಂದ 12 ಶಿಲೆಗಳನ್ನು ಅಯೋಧ್ಯೆಗೆ ತರಿಸಿಕೊಳ್ಳಲಾಗಿದೆ. ಮತ್ತೆರಡು ಶಿಲೆಗಳು ಅಯೋಧ್ಯೆಗೆ ಬರಬೇಕಿದೆ. ಈ ಎಲ್ಲಾ ಶಿಲೆಗಳಿಂದ ಪ್ರತ್ಯೇಕವಾಗಿ 5 ಅಡಿ 2 ಇಂಚಿನ ರಾಮಲಲ್ಲಾನ ವಿವಿಧ ಮೂರ್ತಿಗಳನ್ನು ಕೆತ್ತಲಾಗುವುದು. ಯಾವ ಮೂರ್ತಿ ಸುಂದರ ಮತ್ತು ಸೂಕ್ತವಾಗಿ ಕಾಣುತ್ತದೆಯೋ ಅದನ್ನು ಅಂತಿಮಗೊಳಿಸಲಾಗುತ್ತದೆ ಎಂದು ತಿಳಿದುಬಂದಿದೆ.***

# ಉಡುಪಿ ಕುಂಜಿಬೆಟ್ಟು ಶ್ರೀ ಶಾರದಾ ದೇವಸ್ಥಾನದಲ್ಲಿ ಕೃಷ್ಣಶಿಲಾ ಬಿಂಬ ಪ್ರತಿಷ್ಠೆ – ಬ್ರಹ್ಮಕುಂಭಾಭಿಷೇಕ

ದಿನಾಂಕ 04–03–2023ರ ಬೆಳಗ್ಗೆ ಬೇರೆ ಬೇರೆ ಸಮುದಾಯದವರಿಂದ ಗುರುಗಳಿಗೆ ಫಲ, ಪುಷ್ಪ ಸಮರ್ಪಣಾ ಕಾರ್ಯ ನಡೆಯಿತು. ಹಾಗೆಯೇ ಪಾದಪೂಜಾ ವಿಧಿಗಳು ನೆರವೇರಿತು. ಬೆಳಗ್ಗೆ ಗಂಟೆ 10–00ಕ್ಕೆ ಪ್ರಸ್ತಾವಿತ ಶೃಂಗೇರಿ ಮಠದ ಸ್ಥಾಪನೆಗಾಗಿ ನೋಡಲಾದ ನಾಲ್ಕು ಎಕರೆ ಸ್ಥಳದ ಪರಿವೀಕ್ಷಣೆಯನ್ನು ಮಾಡಲು ಉಡುಪಿ ಸಂತೆಕಟ್ಟೆಯ ಸಮೀಪದ ಲಕ್ಷ್ಮೀನಗರಕ್ಕೆ ಶೃಂಗೇರಿ ಶ್ರೀಗಳು ಭೇಟಿಕೊಟ್ಟು ಸಂತೋಷ ವ್ಯಕ್ತಪಡಿಸಿದರು.

ನಂತರ ಸಾಲಿಕೇರಿಯ ಶ್ರೀ ಬ್ರಹ್ಮಲಿಂಗ ವೀರಭದ್ರ ದುರ್ಗಾಪರಮೇಶ್ವರೀ ದೇವಸ್ಥಾನಕ್ಕೆ ಭೇಟಿ ನೀಡಿದಾಗ ಶ್ರೀ ಶ್ರೀಗಳನ್ನು ಅದ್ದೂರಿಯಾಗಿ ಸ್ವಾಗತಿಸಿ ಪಾದಪೂಜೆ ಗುರುವಂದನೆ ಸಲ್ಲಿಸಲಾಯಿತು. ಪ್ರಥಮ ಬಾರಿಗೆ ಈ ದೇವಸ್ಥಾನಕ್ಕೆ ಭೇಟಿನೀಡಿದ ಶ್ರೀ ಶ್ರೀಗಳು ನೆರೆದಿದ್ದ ಭಕ್ತವೃಂದಕ್ಕೆ ಅನುಗ್ರಹ ಭಾಷಣ ಮಾಡಿದರು.

ಶ್ರೀ ಶಾರದಾ ಮಂಟಪಕ್ಕೆ ಹಿಂದಿರುಗಿದ ಜಗದ್ಗುರುಗಳು, ಅಧ್ಯಕ್ಷರು ಹಾಗೂ ಪದಾಧಿಕಾರಿಗಳು ಮತ್ತು ಎಲ್ಲಾ ನಿರ್ದೇಶಕರಿಗೆ ಫಲ ಮಂತ್ರಾಕ್ಷತೆ ನೀಡಿ ಆಶೀರ್ವದಿಸಿದರು. ಮಧ್ಯಾಹ್ನ ಗಂಟೆ 3–00ಕ್ಕೆ ಶಿವಪಾಡಿ ಶ್ರೀ ಉಮಾಮಹೇಶ್ವರ ದೇಗುಲದತ್ತ ಪ್ರಯಾಣ ಪ್ರಾರಂಭಿಸಿದರು. ಮಣಿಪಾಲದಲ್ಲಿ ಭವ್ಯ ಸ್ವಾಗತದೊಂದಿಗೆ ಐತಿಹಾಸಿಕ ಮೆರವಣಿಗೆಯೊಂದಿಗೆ ಶ್ರೀ ದೇವಳಕ್ಕೆ ಆಗಮಿಸಿದರು. ಅಲ್ಲಿ ನಡೆದ ಧಾರ್ಮಿಕ ಸಭೆಯಲ್ಲಿ ಶ್ರೀ ಶ್ರೀಗಳನ್ನು ಸನ್ಮಾನಿಸಿ ಗೌರವಿಸಲಾಯಿತು. ನೆರೆದ ಸಾವಿರಾರು ಭಕ್ತರನ್ನುದ್ದೇಶಿಸಿ ಅನುಗ್ರಹ ಮಾತುಗಳನ್ನಾಡಿದರು. ಮರುದಿನ ಬೆಳಗ್ಗೆ ಶ್ರೀ ಶ್ರೀ ಕಳೆದ ಹನ್ನೆರಡು ದಿನಗಳಿಂದ ಸತತ ನೆರವೇರುತ್ತಿರುವ ಅತಿರುದ್ರ ಮಹಾಯಾಗದ ಪೂರ್ಣಾಹುತಿಯನ್ನು ನೆರವೇರಿಸಿದರು. ಅಂದು ಸಂಜೆ ಜಗದ್ಗುರುಗಳನ್ನು ಅವರ ಪರಿವಾರದೊಂದಿಗೆ ಬೆಳ್ತಂಗಡಿಯಲ್ಲಿ ನಡೆದ ವಿಶ್ವ ಸ್ಥಾನಿಕ ಸಮಾವೇಶಕ್ಕಾಗಿ ಬೀಳ್ಕೊಡಲಾಯಿತು.

**ಊಟೋಪಚಾರ :** ತಾರೀಕು 26–02–2023ರಂದು ಮೂರ್ತಿಯ ಮೆರವಣಿಗೆ ಬಂದ ಸಂದರ್ಭ ಪ್ರಾರಂಭಗೊಂಡ ಉಪಾಹಾರದ ವ್ಯವಸ್ಥೆಯು ಪ್ರತಿದಿನ ಬೆಳಗ್ಗೆ ಉಪಾಹಾರ ಹಾಗೂ ಮಧ್ಯಾಹ್ನ ಭೋಜನ ಮತ್ತು ಸಂಜೆ ಉಪಾಹಾರ ಹಾಗೂ ರಾತ್ರಿ ಭೋಜನ ಶ್ರೀ ಶಾರದಾ ಮಂಟಪದಲ್ಲಿ ನಿರಂತರ ಮಾಡಲಾಗಿತ್ತು. ಮೊದಲ ಕೆಲವು ದಿನಗಳಲ್ಲಿ 50–60ರಷ್ಟು ಜನ ಇದ್ದರೂ ನಂತರದ ದಿನಗಳಲ್ಲಿ ಸ್ವಯಂಸೇವಕರ ಸಂಖ್ಯೆ ಹೆಚ್ಚುತ್ತಾ ಇದ್ದು, ಎಲ್ಲಿಯೂ ಲೋಪವಾಗದಂತೆ ಊಟೋಪಚಾರದ ವ್ಯವಸ್ಥೆ ನೆರವೇರುತಿತ್ತು. ತಾರೀಕು 03–03–2023ರ ಪ್ರತಿಷ್ಠಾ ಬ್ರಹ್ಮಕುಂಭಾಭಿಷೇಕದ ದಿನ ಸುಮಾರು 2,800ಕ್ಕಿಂತಲೂ ಹೆಚ್ಚು ಭಕ್ತಬಾಂಧವರು ಭೋಜನ ಪ್ರಸಾದ ಸ್ವೀಕರಿಸಿದರು.

## ಸಮಾವೇಶದ ಸಮಾರೋಪ

***ಮಕ್ಕಳಿಗೆ ಶಿಕ್ಷಣದ ಜೊತೆಗೆ ಧಾರ್ಮಿಕ ಪ್ರಜ್ಞೆ ಬೆಳೆಸಿ – ಶೃಂಗೇರಿ ಶ್ರೀಗಳು***

ಸಮಾಜದ ಅಭಿವೃದ್ಧಿಗೆ ಯಾವುದರಿಂದ ಸಾಧ್ಯವೋ ಅದನ್ನು ಮಾಡಬೇಕು. ಐಕ್ಯತೆ ಇದ್ದಾಗ ಸಮಾಜದ ಅಭಿವೃದ್ಧಿ ಸಾಧ್ಯ. ಬ್ರಾಹ್ಮಣ ಪದ್ಧತಿಗಳನ್ನು ಯಥಾವತ್ತಾಗಿ ಆಚರಿಸುವ ಮೂಲಕ ಸಂಸ್ಕಾರ ಬೆಳೆಸಬೇಕು. ಅದರಲ್ಲೂ ಶಿಕ್ಷಣದೊಂದಿಗೆ ಜಪ, ತಪ, ಹಿಂದಿನ ಶಾಸ್ತ್ರ ಪುರಾಣಗಳನ್ನು ಮಕ್ಕಳಿಗೆ ಕಲಿಸಿ ಅವರನ್ನು ಸಮಾಜದಲ್ಲಿ ಸಂಸ್ಕಾರಯುತ ಪ್ರಜೆಗಳನ್ನಾಗಿಸುವುದು ಹೆತ್ತವರ ಕರ್ತವ್ಯ ಎಂದು ಶ್ರೀ ಶೃಂಗೇರಿ ಶಾರದಾ ಪೀಠಾಧೀಶ್ವರ ತತ್ಕರಕಮಲಸಂಜಾತರಾದ ಜಗದ್ಗುರು ಶ್ರೀ ಶ್ರೀ ವಿಧುಶೇಖರ ಭಾರತೀ ಶ್ರೀಗಳು ನುಡಿದರು.

ಅವರು ಮಾರ್ಚ್ 5ರಂದು ಲ್ಯಾಲ ಶ್ರೀ ಸುಬ್ರಹ್ಮಣ್ಯ ಸಭಾಭವನದಲ್ಲಿ ಎರಡು ದಿನ ನಡೆದ ವಿಶ್ವಮಟ್ಟದ ಸ್ಥಾನಿಕ ಬ್ರಾಹ್ಮಣ ಸಮಾವೇಶದಲ್ಲಿ ಆಶೀರ್ವಚನ ನೀಡಿದರು. ಶಾಸ್ತ್ರಗಳ ಫಲ, ದೀರ್ಘಕಾಲ. ಇದನ್ನು ಅಧ್ಯಯನ ಮಾಡಬೇಕು. ಸಾಂಪ್ರದಾಯಿಕ ಆಚರಣೆಗಳು ನಮ್ಮದಾಗಬೇಕು. ಜೀವನದಲ್ಲಿ ಭಾಗ್ಯವಸ್ತುಗಳು ಸಿಗಲು ಧರ್ಮ ಮಾರ್ಗದಲ್ಲಿ ನಡೆಯಬೇಕು. ಮಕ್ಕಳಿಗೆ ಕನಿಷ್ಠ ಸಾಂಪ್ರದಾಯಿಕ ಶಿಕ್ಷಣವನ್ನು ಕಲಿಸಬೇಕು. ಆ ಮೂಲಕ ಮಕ್ಕಳನ್ನು ಸಮಾಜದ ಶ್ರೇಷ್ಠ ವ್ಯಕ್ತಿಗಳನ್ನಾಗಿಸಬೇಕು. ಸಾಂಪ್ರದಾಯಿಕ



ಶಿಕ್ಷಣ ಪ್ರತಿ ಮನೆಯಲ್ಲಿ, ಪ್ರತಿ ಊರಿನಲ್ಲಿ ನಡೆಯಬೇಕು ಎಂದರು. ಸಮ್ಮೇಳನದಿಂದ ಸಮಾಜ ಐಕ್ಯಮತವಾಗಿ ಬೆಳೆಯಲಿ. ಬೆಳ್ತಂಗಡಿಯ ಸ್ಥಾನಿಕ ಸಮಾಜ ಮಠದೊಂದಿಗೆ ಗೌರವ ಭಾವನೆ ಹೊಂದಿದ್ದು ಇದರಿಂದಾಗಿ ಇಲ್ಲಿಗೆ ಪ್ರೀತಿಯಿಂದ ಬಂದಿದ್ದೇನೆ. ಇಲ್ಲಿನ ಶಾಸಕ ಶ್ರೀ ಹರೀಶ್ ಪೂಂಜ ಸಮಾಜಕ್ಕೆ ದೊಡ್ಡ ಕೊಡುಗೆ ನೀಡುತ್ತಿದ್ದಾರೆ ಅಲ್ಲದೆ ಮಠಕ್ಕೆ ರಾಜಕೀಯ ವ್ಯಕ್ತಿಯಾಗಿ ಬರದೆ ಭಕ್ತನಾಗಿ ಬರುತ್ತಾ ಮಠದಲ್ಲಿ ಗೌರವ ಭಾವನೆ ಹೊಂದಿದ್ದಾರೆ ಎಂದು ಶೃಂಗೇರಿ ಶ್ರೀಗಳು ಹೇಳಿದರು. ಇದೇ ಸಂದರ್ಭದಲ್ಲಿ ಉಡುಪಿ ಚಿಟ್ಪಾಡಿ ಶ್ರೀ ಸರ್ವೋತ್ತಮ ರಾವ್ ಇವರಿಗೆ ಸ್ಥಾನಿಕರತ್ನ ಪ್ರಶಸ್ತಿ ನೀಡಲಾಯಿತು. ಉಡುಪಿ ಸ್ಥಾನಿಕ ಸಮಾಜದ ನಿವೇಶನಕ್ಕೆ ದೇಣಿಗೆ ನೀಡಿದ ದಾನಿಗಳನ್ನು ಶ್ರೀಗಳು ಗೌರವಿಸಿದರು. ಶ್ರೀಗಳನ್ನು ಭವ್ಯ ಮೆರವಣಿಗೆಯಲ್ಲಿ ಕರೆತರಲಾಯಿತು.

ಸಮಾವೇಶದ ಪ್ರಮುಖರಾದ ಶ್ರೀ ಎನ್. ಕೆ. ಜಗನ್ನಿವಾಸ ರಾವ್ ಪುತ್ತೂರು, ಬೆಳ್ತಂಗಡಿ ಸ್ಥಾನಿಕ ಸಭಾದ ಶ್ರೀ ಪಿ. ರಾಧಾಕೃಷ್ಣ ರಾವ್ ಧರ್ಮಸ್ಥಳ, ಶ್ರೀ ಪಿ. ಲಕ್ಷ್ಮೀನಾರಾಯಣ ರಾವ್ ಧರ್ಮಸ್ಥಳ, ಶ್ರೀ ಎಂ. ಎಸ್. ಅರುಣ್ ಕುಮಾರ್, ಶ್ರೀಮತಿ ಮಮತಾ ಹರೀಶ್ ರಾವ್, ಶ್ರೀ ಎಂ. ದೇವಾನಂದ ಭಟ್ ಬೆಳುವಾಯಿ, ಶ್ರೀ ಉದಯ ಬಾರ್ಕೂರು, ಡಾ। ವೈ. ಸುದರ್ಶನ್ ರಾವ್ ಉಡುಪಿ, ಶ್ರೀ ಕೆ. ಮುರಲೀಧರ ರಾವ್ ನಿಟ್ಟೆ ಹಾಗೂ ಪದಾಧಿಕಾರಿಗಳು ಉಪಸ್ಥಿತರಿದ್ದರು. ಶ್ರೀ ಎಂ. ದೇವಾನಂದ ಭಟ್ ಸ್ವಾಗತಿಸಿದರು. ಶ್ರೀ ಬಿ. ಕೆ. ಧನಂಜಯ್ ರಾವ್ ಕಾರ್ಯಕ್ರಮ ನಿರೂಪಿಸಿದರು.

**ಕೃತಜ್ಞತಾರ್ಪಣೆ :** *ಶ್ರೀ ಶಾರದಾ ದೇವಸ್ಥಾನ, ಕುಂಜಿಬೆಟ್ಟು ಉಡುಪಿ ಇಲ್ಲಿ ನೆರವೇರಿದ ಪುನಃಪ್ರತಿಷ್ಠೆ–ಬ್ರಹ್ಮಕುಂಭಾಭಿಷೇಕದ ಸಂದರ್ಭದಲ್ಲಿ ಸೂಕ್ತ ಮಾರ್ಗದರ್ಶನ ನೀಡಿದ ಶ್ರೀ ಮಜ್ಜಗದ್ಗುರು ಶ್ರೀ ಶ್ರೀ ಭಾರತೀ ತೀರ್ಥಸನ್ನಿಧಾನಂಗಳವರಿಗೆ ಹಾಗೂ ಉಡುಪಿಗೆ ಆಗಮಿಸಿ ಪ್ರತಿಷ್ಠೆ–ಬ್ರಹ್ಮಕುಂಭಾಭಿಷೇಕ ಕೈಗೊಂಡು ಭಕ್ತ ಬಾಂಧವರಿಗೆ ಆಶೀರ್ವಚನ ನೀಡಿದ ಶ್ರೀಮಜ್ಜಗದ್ಗುರು ಶ್ರೀ ಶ್ರೀ ವಿಧುಶೇಖರ ಭಾರತೀ ಸನ್ನಿಧಾನಂಗಳವರಿಗೆ ಸಾಷ್ಟಾಂಗ ಪ್ರಣಾಮಗಳೊಂದಿಗೆ ಕೃತಜ್ಞತೆಗಳು.*

*ಶ್ರೀ ಕ್ಷೇತ್ರ ಶೃಂಗೇರಿಯ ಆಡಳಿತಾಧಿಕಾರಿ ಶ್ರೀ ಗೌರೀಶಂಕರ್ ಮತ್ತು ಶ್ರೀಗಳ ಜೊತೆ ಆಗಮಿಸಿದ್ದ ಅವರ ಪರಿವಾರ ಮತ್ತು ಸಿಬ್ಬಂದಿ ವರ್ಗಕ್ಕೆ, ಸತತ ಮಾರ್ಗದರ್ಶನ ನೀಡಿದ ಶ್ರೀ ಕ್ಷೇತ್ರ ಶೃಂಗೇರಿಯ ಪ್ರಾಂತ್ಯ ಧರ್ಮಾಧಿಕಾರಿಗಳಾದ ವೇದಬ್ರಹ್ಮಶ್ರೀ ವಾಗೀಶಶಾಸ್ತ್ರಿ ಮತ್ತು ಶ್ರೀ ಸತ್ಯಶಂಕರ ಬೊಳ್ಳಾವ ಇವರಿಗೆ, ಪ್ರತಿಷ್ಠೆ–ಬ್ರಹ್ಮಕುಂಭಾಭಿಷೇಕ ಕಾರ್ಯಕ್ರಮವನ್ನು ಸಂಪನ್ನಗೊಳಿಸಿದ ಎಲ್ಲ ವೈದಿಕ ಬಳಗಕ್ಕೆ, ಕಾರ್ಯಕ್ರಮಕ್ಕೆ ವಸ್ತುರೂಪದಲ್ಲಿ ಮತ್ತು ಧನಸಹಾಯ ನೀಡಿದ ಎಲ್ಲ ದಾನಿಗಳಿಗೆ, ವಿವಿಧ ಸೇವೆ ನಡೆಸಿಕೊಟ್ಟ ಭಕ್ತರಿಗೆ, ಸ್ವಯಂಸೇವಕರಾಗಿ ದುಡಿದ ಎಲ್ಲರಿಗೆ, ಆಗಮಿಸಿದ್ದ ಎಲ್ಲ ಭಗವದ್ಭಕ್ತರಿಗೆ, ಸಮಾಜದ ಬಂಧುಗಳಿಗೆ, ಶಾರದಾ ಮಂಟಪದ ಮೇನೇಜರ್ಸ್ ಹಾಗೂ ಅರ್ಚಕ ವೃಂದಕ್ಕೆ ದೇವರ ಆಭರಣ, ಪ್ರಭಾವಳಿ ಒಪ್ಪಿಸಿದ ಭಕ್ತರೆಲ್ಲರಿಗೆ, ನಿರಂತರ ಶ್ರಮವಹಿಸಿ ದುಡಿದ ಸಂಘದ ಆಡಳಿತ ಮಂಡಳಿಯ ನಿರ್ದೇಶಕರಿಗೆ, ಪದಾಧಿಕಾರಿಗಳಿಗೆ ಎಲ್ಲರಿಗೂ ಉಡುಪಿಯ ಸ್ಥಾನಿಕ ಬ್ರಾಹ್ಮಣ ಸಂಘದ ಅಧ್ಯಕ್ಷರು ಹಾಗೂ ಕಾರ್ಯದರ್ಶಿಗಳು ಅನಂತ ಕೃತಜ್ಞತೆ ಸಲ್ಲಿಸಿದ್ದಾರೆ.*


Manish Rao U.
Tel : (O) 2223301
Mobile : 9448726499 / 8884284939
NAVA COMPUTERS
Dealers in : C. C. Camera, Theft Alarm, Remote Locks
Computers Hardware and Peripherals
Computer Sales & Services
1st Floor, Bharath Building, P. M. Rao Road, Hampankatta, Mangaluru - 575 001

Sharekhan
Your guide to the financial jungle
EQUITIES | DERIVATIVES | COMMODITIES
CURRENCY | MUTUAL FUND | IPOs
PMS | DEMAT
Pradeep Rao K.
NAVADURGA FINANCIALS
Ph: 0824-2412905, 2441318 Mobile: 94481 91028

# ಅಪಾರಕೀರ್ತಿ ಗಳಿಸಿ...



ಬಾರ್ಕೂರು ಶ್ರೀ ಕುಮಾರಸ್ವಾಮಿ ಬಿ. ಆರ್. ಮತ್ತು ಶ್ರೀಮತಿ ಸವಿತಾ ಎರ್ಮಾಳ್ ಇವರ ಪುತ್ರಿ **ಕುಮಾರಿ ನಮನ ಬಿ. ಕೆ.** ಇವರು 2022–23ನೇ ಸಾಲಿನ ದ್ವಿತೀಯ ಪಿಯುಸಿ ವಿಜ್ಞಾನ ವಿಭಾಗದಲ್ಲಿ 93% ಫಲಿತಾಂಶ ಪಡೆದಿರುತ್ತಾರೆ. ಇವರಿಗೆ 2020–21ನೇ ಸಾಲಿನಲ್ಲಿ ಅವರ ಅದ್ಭುತ ಸಾಧನೆಗಾಗಿ 'ಕೆಳದಿ ಚೆನ್ನಮ್ಮ ರಾಜ್ಯ ಶೌರ್ಯ ಪ್ರಶಸ್ತಿ' ಬಂದಿರುತ್ತದೆ.




**ಕು| ಪ್ರಣಮ್ಯ** ಈ ಬಾರಿಯ ಪಿ.ಯು.ಸಿ. ಪರೀಕ್ಷೆಯಲ್ಲಿ ಶೇ. 95 ಅಂಕಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾಳೆ. ಇವಳು ಬೆಂಗಳೂರಿನ ಚಿಕ್ಕಬಾಣಾವರದ ಶ್ರೀ ಮೋಹನದಾಸ್ ವೈ. ಮತ್ತು ಶ್ರೀಮತಿ ಪೂರ್ಣಿಮಾರವರ ಸುಪುತ್ರಿ.



**ಕು| ಸಹನಾ** ಈ ಬಾರಿಯ ಪಿ.ಯು.ಸಿ. ಪರೀಕ್ಷೆಯಲ್ಲಿ ಶೇ. 94 ಅಂಕಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾಳೆ. ಇವಳು ಶ್ರೀ ಹರಿಕಿರಣ್ ಕೊಯಿಲ ಮತ್ತು ಶ್ರೀಮತಿ ಅನುರಾಧಾ ಹಿರೇಬಂಡಾಡಿ ಇವರ ಸುಪುತ್ರಿ ಹಾಗೂ ಪುತ್ತೂರು ವಿವೇಕಾನಂದ ಕಾಲೇಜಿನ ವಿದ್ಯಾರ್ಥಿನಿ.



**ಚಿ| ಅಖಿಲೇಶ್ ರಾವ್** ಈ ಬಾರಿಯ ಪಿ.ಯು.ಸಿ. ಪರೀಕ್ಷೆಯಲ್ಲಿ ಶೇ. 95 ಅಂಕಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾನೆ. ಇವನು ಪಡುಬಿದ್ರೆ, ಶ್ರೀ ಸುನಿಲ್ ಕುಮಾರ್ ಮತ್ತು ಶ್ರೀಮತಿ ಪ್ರಶಾಂತಿ ರಾವ್ ಇವರ ಸುಪುತ್ರ.



ಬೈಕಾಡಿ ಡಾ| ಅನಿಲ್ ಕುಮಾರ್ ಮತ್ತು ಶ್ರೀಮತಿ ಡಾ| ಪ್ರಸನ್ನ ಎ. ರಾವ್ ಇವರ ಪುತ್ರಿ **ಕುಮಾರಿ ಅನನ್ಯ ರಾವ್** ಇವರು ಈ ಬಾರಿಯ ಪಿಯುಸಿ ವಿಜ್ಞಾನ ವಿಭಾಗದಲ್ಲಿ ಶೇ. 97.33 ಅಂಕಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾಳೆ.



**ಕು| ಅನುಜ್ಞಾ** ಈ ಬಾರಿಯ ಪಿ.ಯು.ಸಿ. ಪರೀಕ್ಷೆಯಲ್ಲಿ ಶೇ. 94 ಅಂಕಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾಳೆ. ಇವಳು ಚಿನಾಡಿ ಶ್ರೀ ರಾಜ್‌ಗೋಪಾಲ್ ರಾವ್ ಮತ್ತು ಶ್ರೀಮತಿ ಆಶಾಲತಾರವರ ಸುಪುತ್ರಿ.



**ಚಿ| ಸನ್ಮಿತ್** ಈ ಬಾರಿಯ ಪಿ.ಯು.ಸಿ. ಪರೀಕ್ಷೆಯಲ್ಲಿ ಶೇ. 90 ಅಂಕಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾನೆ. ಇವನು ಚಿನಾಡಿ ಶ್ರೀ ಸಿ. ಆರ್. ರವಿ ನಾರಾಯಣ್ ಮತ್ತು ಶ್ರೀಮತಿ ಅನುಪಮಾರವರ ಸುಪುತ್ರ ಹಾಗೂ ಮೈಸೂರಿನ ಎಸ್.ಎ.ಸಿ. ಕಾಲೇಜಿನ ವಿದ್ಯಾರ್ಥಿ.



**ಕು| ಕೃತಿ ಜಿ. ರಾವ್** ಈ ಬಾರಿಯ ಪಿ.ಯು.ಸಿ. ಪರೀಕ್ಷೆಯಲ್ಲಿ ಶೇ. 92 ಅಂಕಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾಳೆ. ಇವಳು ಕುದ್ಕುಳಿ ಶ್ರೀ ಗಂಗಾಧರ್ ರಾವ್ ಮತ್ತು ಶ್ರೀಮತಿ ಕವಿತಾ ಇವರ ಸುಪುತ್ರಿ.



**ಕು| ಶಾಮ** ಈ ಬಾರಿಯ ಪಿ.ಯು.ಸಿ. ಪರೀಕ್ಷೆಯಲ್ಲಿ ಶೇ. 92 ಅಂಕಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾಳೆ. ಇವಳು ಶ್ರೀ ಎಚ್. ಸುರೇಶ್ ರಾವ್ ಮತ್ತು ಶ್ರೀಮತಿ ಪೂರ್ಣಿಮಾ ಇವರ ಸುಪುತ್ರಿ.




ಮಂದಾರ್ತಿ ಕಲ್ಲುದೇವಸ್ಥಾನದ ಶ್ರೀ ಕೆ. ಮಂಜುನಾಥ ರಾವ್ ಮತ್ತು ಶ್ರೀಮತಿ ಭಾನುಮತಿ ಎಂ. ರಾವ್ ಇವರ ಸುಪುತ್ರಿ **ಕು| ಪ್ರಜ್ಞಾ ರಾವ್** ಈ ಬಾರಿಯ ದ್ವಿತೀಯ ಪಿ.ಯು.ಸಿ. ವಿಜ್ಞಾನ ವಿಭಾಗದಲ್ಲಿ ಶೇ. 95.20 ಪಡೆದು ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾಳೆ.



**ಚಿ| ಅಭಯ್ ಮಹೇಶ್** ಈ ಬಾರಿಯ ಪಿ.ಯು.ಸಿ. ಪರೀಕ್ಷೆಯಲ್ಲಿ ಶೇ. 97 ಅಂಕಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾನೆ. ಇವನು ಎಲ್ಲೂರು ಶ್ರೀ ಮಹೇಶ್ ರಾವ್ ಮತ್ತು ಶ್ರೀಮತಿ ನಂದನ ಇವರ ಸುಪುತ್ರ.



**ಚಿ| ಆದಿತ್ಯ ರಾವ್** ಈ ಬಾರಿಯ ಪಿ.ಯು.ಸಿ. ಪರೀಕ್ಷೆಯಲ್ಲಿ ಶೇ. 95 ಅಂಕಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾನೆ. ಇವನು ಶ್ರೀ ರಾಮಕೃಷ್ಣ ಕಾಟುಕುಕ್ಕೆ ಮತ್ತು ಶ್ರೀಮತಿ ಉಮಾ ರಾವ್‌ರವರ ಸುಪುತ್ರ ಹಾಗೂ ಅಳಿಕೆ ಸತ್ಯಸಾಯಿ ಲೋಕಸೇವಾ ಕಾಲೇಜಿನ ವಿದ್ಯಾರ್ಥಿ.



**ಚಿ| ಶ್ರೀದತ್ತ ಹೆಬ್ಬಾರ್** ಈ ಬಾರಿಯ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಶೇ. 95.5 ಅಂಕಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾನೆ. ಇವನು ಕಬ್ಬಿನಾಲೆ ಶ್ರೀ ಕೆ. ಮಂಜುನಾಥ್ ಹೆಬ್ಬಾರ್ ಮತ್ತು ಶ್ರೀಮತಿ ಉಷಾ ದಂಪತಿಗಳ ಸುಪುತ್ರ.



**ಚಿ| ಕಶ್ಯಪ್** ಈ ಬಾರಿಯ ಪಿ.ಯು.ಸಿ. ಪರೀಕ್ಷೆಯಲ್ಲಿ ಶೇ. 94 (562/600)ಅಂಕಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾನೆ. ಇವನು ತೆಂಕಿಲ ಶ್ರೀ ಕೃಷ್ಣ ಕುಮಾರ್ ಮತ್ತು ಶ್ರೀಮತಿ ರೂಪಶ್ರೀಯವರ ಸುಪುತ್ರ ಹಾಗೂ ಪುತ್ತೂರಿನ ವಿವೇಕಾನಂದ ಕಾಲೇಜಿನ ವಿದ್ಯಾರ್ಥಿ.



**ಚಿ| ಅನಿರುದ್ಧ ವಿ. ರಾವ್** ಇವರು ಈ ಬಾರಿಯ ಪಿ.ಯು.ಸಿ. ವಿಜ್ಞಾನ ವಿಭಾಗದಲ್ಲಿ 96% ಅಂಕ ಪಡೆದು ಉನ್ನತ ದರ್ಜೆಯಲ್ಲಿ ಉತ್ತೀರ್ಣರಾಗಿರುತ್ತಾರೆ. ಇವರು ಮಂಗಳೂರಿನ ಕದ್ರಿಯಲ್ಲಿರುವ ಶ್ರೀ ಯು.ಎಸ್. ವಿವೇಕ್ ರಾವ್ ಮತ್ತು ಶ್ರೀಮತಿ ಕಲಾನಿಧಿಯವರ ಸುಪುತ್ರ.



ಶ್ರೀ ದಿನೇಶ್ ಪಿ. ಮತ್ತು ಶ್ರೀಮತಿ ಸುಮನರವರ ಸುಪುತ್ರಿ **ಕು| ಮಾಧುರ್ಯ** ಈ ಬಾರಿಯ ಪಿ.ಯು.ಸಿ. ಪರೀಕ್ಷೆಯಲ್ಲಿ ಶೇ. 98 (587/600) ಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾಳೆ.



**ಕು| ಖುಷಿ ಎಂ. ರಾವ್** ಈ ಬಾರಿಯ ಪಿ.ಯು.ಸಿ. ಪರೀಕ್ಷೆಯಲ್ಲಿ ಶೇ. 96.5 ಅಂಕಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾಳೆ. ಇವಳು ಶ್ರೀ ಸುಬ್ರಹ್ಮಣ್ಯ ಮತ್ತು ಶ್ರೀಮತಿ ಮಂಜುಳರವರ ಸುಪುತ್ರಿ.



**ಚಿ| ಭರತೇಶ್ ಪಿ. ಬಿ.** ಈ ಬಾರಿಯ ಕರ್ನಾಟಕ ಬೋರ್ಡ್ ಪಿ.ಯು.ಸಿ. ವಿಜ್ಞಾನ ವಿಭಾಗ ಪರೀಕ್ಷೆಯಲ್ಲಿ ಶೇ. 94 (562/600) ಅಂಕಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾನೆ. ಇವನು ಸುಳ್ಯ ಕೇರ್ಪಳ ವಕೀಲ ಶ್ರೀ ಭಾಸ್ಕರ್ ರಾವ್ ಮತ್ತು ಶ್ರೀಮತಿ ಕಲ್ಪಲತ ದಂಪತಿಗಳ ಸುಪುತ್ರ.



**ಕು| ಶ್ವೇತಾ** ಈ ಬಾರಿಯ ಪಿ.ಯು.ಸಿ. ಪರೀಕ್ಷೆಯಲ್ಲಿ ಶೇ. 97 (578/600) ಅಂಕಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾಳೆ. ಇವಳು ಸುಳ್ಯ ಐ. ಕೆ. ರಾಮಚಂದ್ರ ರಾವ್ ಮತ್ತು ಅನುಸೂಯರವರ ಸುಪುತ್ರಿ.



**ಚಿ| ವಿಘ್ನೇಶ್ ಕುಮಾರ್** ಈ ಬಾರಿಯ ಪಿ.ಯು.ಸಿ. ಪರೀಕ್ಷೆಯಲ್ಲಿ ಶೇ. 95 ಅಂಕಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾನೆ. ಇವನು ಚೊಕ್ಕಾಡಿ ದಿವಾಕರ್ ರಾವ್ ಮತ್ತು ಶ್ರೀಮತಿ ವಿಜಯಲಕ್ಷ್ಮೀಯವರ ಸುಪುತ್ರ.



**ಕು| ಅಪೇಕ್ಷಾ ಎಚ್.** ಈ ಬಾರಿಯ ಕರ್ನಾಟಕ ಬೋರ್ಡ್ ಪಿ.ಯು.ಸಿ. ಪರೀಕ್ಷೆಯಲ್ಲಿ ಶೇಕಡಾ 95 (570/600) ಪಡೆದು ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾಳೆ. ಇವಳು ಹೈದಂಗೂರು ಶ್ರೀಧರ ರಾವ್ ಮತ್ತು ರಾಜೇಶ್ವರಿಯವರ ಸುಪುತ್ರಿ.

# ಅಪಾರಕೀರ್ತಿ ಗಳಿಸಿ...




**ಡಾ| ಸಮಿಕ್ಷಾ ಎಸ್. ರಾವ್**ರವರು ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾಲಯದಿಂದ ಎಂ.ಬಿ.ಬಿ.ಎಸ್. ಪದವಿ ಪಡೆದಿದ್ದಾರೆ. ಇವರು ಶ್ರೀ ಸಂತೋಷ್ ಕಾವಳಕಟ್ಟೆ ಹಾಗೂ ಶ್ರೀಮತಿ ಭಾರತಿ ಇವರ ಸುಪುತ್ರಿ ಮತ್ತು ಮಂಗಳೂರಿನ ಎ. ಜೆ. ಮೆಡಿಕಲ್ ಕಾಲೇಜಿನ ವಿದ್ಯಾರ್ಥಿನಿ.

---




**ಡಾ| ಮಾನಸ ಪಿ. ರಾವ್** ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನದಿಂದ ಎಂ.ಬಿ.ಬಿ.ಎಸ್. ಪದವಿಯನ್ನು ದ್ವಿತೀಯ ರ್‍ಯಾಂಕ್‌ನೊಂದಿಗೆ ಪಡೆದಿದ್ದಾಳೆ. ತನ್ನ ಎಂ.ಬಿ.ಬಿ.ಎಸ್. ಕಲಿಕೆಯಲ್ಲಿ ಒಟ್ಟು 11 ರ್‍ಯಾಂಕ್‌ಗಳನ್ನು ಪಡೆದಿದ್ದು, ಇಡೀ ಬ್ಯಾಚ್‌ನಲ್ಲಿ ಎರಡನೇ ಸ್ಥಾನ ಪಡೆದಿದ್ದಾಳೆ. ಇವಳು ಶ್ರೀ ಪ್ರವೀಣಚಂದ್ರ ಎಸ್. ರಾವ್ ಹಾಗೂ ಶ್ರೀಮತಿ ಕವಿತಾ ರಾವ್‌ರವರ ಸುಪುತ್ರಿ ಮತ್ತು ಮಂಗಳೂರಿನ ಎ. ಜೆ. ಮೆಡಿಕಲ್ ಕಾಲೇಜಿನ ವಿದ್ಯಾರ್ಥಿನಿ.

## ಅಳಿದ ನೆಮ್ಮನೆ... ಇಲ್ಲಿರುವುದು ಸುಮ್ಮನೆ...



**ಶ್ರೀ ಕೆ. ಎಲ್. ಶ್ರೀಪತಿ ರಾವ್** (85) ತಾ. 20–4–2023ರ ಗುರುವಾರ ಮುಂಬಯಿಯಲ್ಲಿ ನಿಧನ ಹೊಂದಿದರು. ಇವರು ಪತ್ನಿ, ಇಬ್ಬರು ಪುತ್ರರನ್ನು ಅಗಲಿದ್ದಾರೆ.

❖❖❖



ಉಲ್ತೂರು ಆರ್. ವಾಸುದೇವ ರಾವ್‌ರವರ ಪತ್ನಿ **ಶ್ರೀಮತಿ ಶಾಂತ** (70) ತಾ. 23–4–2023ರ ರವಿವಾರ ನಿಧನ ಹೊಂದಿದರು. ಅವರು ಓರ್ವ ಪುತ್ರ, ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ.


❖❖❖



ನಾಟಿವೈದ್ಯೆಯಾಗಿ ಪ್ರಸಿದ್ಧಿ ಪಡೆದಿದ್ದ ನಂದಿಕೂರು ಗ್ರಾಮದ ನಿವಾಸಿ ದಿ| ಕಟೀಲು ಅಪ್ಪುರಾಯರ ಪತ್ನಿ **ರತ್ನಮ್ಮ** (83) ಎಪ್ರಿಲ್ 13ನೇ ಗುರುವಾರ ಹೃದಯಾಘಾತದಿಂದ ನಿಧನ ಹೊಂದಿದರು. ಮೃತರು ಮೂವರು ಪುತ್ರರನ್ನು ಅಗಲಿದ್ದಾರೆ.

ತಮ್ಮ ಹಿರಿಯರಿಂದ ಬಳುವಳಿಯಾಗಿ ಬಂದಿದ್ದ ನಾಟಿವೈದ್ಯ ಪದ್ಧತಿಯ ಮೂಲಕ ಹೊಟ್ಟೆಯಲ್ಲಿನ ವಿಷಕಾರಿ ಪದಾರ್ಥಗಳನ್ನು ವಾಂತಿ ಮಾಡಿಸಿ ಇವರು ಹೊರ ತೆಗೆಸುತ್ತಿದ್ದರು. ಇವರ ಜನಸೇವೆಯನ್ನು ಉಡುಪಿಯ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಆಯುರ್ವೇದ ಆಸ್ಪತ್ರೆಯ ಜಾನಪದ ವೈದ್ಯಕೀಯ ಸಂಶೋಧನ ಕೇಂದ್ರವು ಗುರುತಿಸಿ ಶ್ಲಾಘಿಸಿತ್ತು. 'ಉದಯವಾಣಿ'ಯೂ ಇವರ ನಾಟಿವೈದ್ಯತನದ ಪರಿಶ್ರಮವನ್ನು ಗುರುತಿಸಿತ್ತು. ಕರ್ನಾಟಕ ಮಾತ್ರವಲ್ಲದೆ ದಿಲ್ಲಿ, ಗೋವಾ ಸಹಿತ ಹಲವೆಡೆಗಳಿಂದ ರಾಜಕಾರಣಿಗಳು, ಸಿನೆಮಾ ನಟರು, ಸಾಹಿತಿಗಳು, ಉದ್ಯಮಿಗಳ ಸಹಿತ ಎಲ್ಲ ಸ್ತರದ ಜನರು ಇವರಲ್ಲಿಗೆ ಬರುತ್ತಿದ್ದರು. ಇದನ್ನು ಬಳುವಳಿಯಾಗಿ ತನ್ನ ಪುತ್ರರೊಬ್ಬರಿಗೆ ಉಪದೇಶಿಸಿರುವ ರತ್ನಮ್ಮ ನಾಟಿವೈದ್ಯ ಪದ್ಧತಿಗೆ ಅಳಿವಿಲ್ಲ ಎಂಬುದನ್ನೂ ತನ್ನ ಜೀವಮಾನವಿಡೀ ಪ್ರತಿಪಾದಿಸುತ್ತ ಬಂದಿದ್ದರು.

## ಪ್ರಸಿದ್ಧ ಜ್ಯೋತಿಷಿ ಶ್ರೀ ಸುಕುಮಾರ ಆಲಂಪಾಡಿಯವರಿಗೆ ಸನ್ಮಾನ



ಶೃಂಗೇರಿ ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಮಹಾಸನ್ನಿಧಾನಂಗಳವರ 73ನೇ ವರ್ಧಂತ್ಯುತ್ಸವದ ಸಂದರ್ಭದಲ್ಲಿ ಕೋಟೆಕಾರಿನಲ್ಲಿರುವ ಶೃಂಗೇರಿ ಮಠದ ಶಾಖೆಯಲ್ಲಿ ಆಯೋಜಿಸಿದ ಸಮಾರಂಭದಲ್ಲಿ ಕಾಸರಗೋಡಿನ ಪ್ರಸಿದ್ಧ ಜ್ಯೋತಿಷಿ ಹಾಗೂ ಹಲವು ಜ್ಯೋತಿಷ್ಯ ಪುಸ್ತಕಗಳ ಕರ್ತೃ ಶ್ರೀ ಸುಕುಮಾರ ಆಲಂಪಾಡಿ ಇವರನ್ನು ಜ್ಯೋತಿಷ್ಯ ಕ್ಷೇತ್ರದ ಅವರ ಸಾಧನೆಗಾಗಿ ಮಠದ ಧರ್ಮಾಧಿಕಾರಿ ಶ್ರೀ ಬೊಳ್ಳಾವ ಸತ್ಯಶಂಕರರ ಇವರ ಸಾನ್ನಿಧ್ಯದಲ್ಲಿ ಸನ್ಮಾನಿಸಿ ಗೌರವಿಸಲಾಯಿತು.

Celebrating 60th Year 1963-2023
RAJESH POWER PRESS
PRINTERS & PUBLISHERS
DARBE - 574 202, PUTTUR, D. K., KARNATAKA
Phone : (08251) 231696, 231697 & 9448481696
E-mail : msraghunathrao@hotmail.com

Prop. : SUDHAKAR BELLE
✆ : 9845193103/ 9481563103
KARAN DIGITAL STUDIO
Sadasukh Building, Nr. Postoffice, Padubidri - 574 111
Opp. Busstand Belman
All Marriage & Other functions Photography & Videography Available

ಜ್ಞಾನಾರ್ಜನೆಯ ಗುರಿಯೊಂದಿಗೆ
'ಜ್ಞಾನ ಶಕ್ತಿ'ಯು ಸಮಾಜದ ಶಕ್ತಿಯಾಗಿ, ಶಾಶ್ವತವಾಗಿ ಬಾಳ ಬೆಳಗಲಿ!
ಶುಭಾಶಯಗಳೊಂದಿಗೆ –
G. K. KOLPE
House No. 7-3-31-D1,'Vaishnavi' (Upstairs)
Vadiraja 2nd Cross, Bailakere, Udupi - 576 101
Mobile : 9449903002

Muralidhara Rao Adyapadi
Proprietor
Mob : 94480 27259
99803 16434
SPANDANA
Constructions
IInd Floor (202)
'Yashodharathna', Sai Sharada Apts.
Near Sharada Vidyalaya, Kodialbail , Mangaluru - 3
CUSTOMER'S SATISFACTION IS OUR MOTTO

PRAVEEN KUMAR ADYAPADY
NOTARY & ADVOCATE
MANGALORE OFFICE
JANVI PLAZA, IInd FLOOR
BUNTS HOSTEL, MANGALORE
BAJPE OFFICE
OZANAM COMPLEX, IInd FLOOR
CHURCH BUILDING, MAIN ROAD, BAJPE
0824 - 2254478 (O) 9620392584, 9448724981(M), 2254448 (R)
We undertakes : Civil, Criminal, Motor Vehicles, A.C., D.C. Cases, Land Conversion, Registration etc.

Sri Hari Adyapady
Proprietor
Ph : 0824-2251597 (R)
2252119 (O)
Mobile : 9448344612
9964072489
SHIVA ELECTRICALS
2nd Floor, Ozanam Complex, Church Building
Main Road, BAJPE, MANGALORE
We undertake all types of Electrical, Plumbing and Sanitary works

ಪತ್ರಿಕೆಗೆ ಶುಭ ಬಯಸುವ–
ಮೊಬೈಲ್ : 9972989678
9448104174
ರವಿಕಿರಣ್ ಕ್ಯೊಲ, ಬಿ.ಎ., ಎಲ್‌ಎಲ್.ಬಿ.
ವಕೀಲರು ಮತ್ತು ದ. ಕ. ಜಿಲ್ಲಾ ನೋಟರಿ (ಭಾರತ ಸರ್ಕಾರ)
2ನೇ ಮಹಡಿ, ಕಾಮತ್ ಕಟ್ಟಡ, ಉಪ್ಪಿನಂಗಡಿ
ಪುತ್ತೂರು ತಾಲೂಕು, ದ. ಕ., 574 241

# ಕೂಡ್ಲು ಶ್ಯಾನುಭೋಗ ಸಂಗೀತ ಟ್ರಸ್ಟ್ (ರಿ.)

ನಂ. 11, 'ಶ್ರೀಶ', 5ನೇ ಅಡ್ಡರಸ್ತೆ, ಸುಪ್ರಜಾನಗರ, ಕೋಣನಕುಂಟೆ, ಬೆಂಗಳೂರು

## 'ಕಲೆಯ ಆಗರ ರಸತರಂಗ'





ಸಂಗೀತ, ಯಕ್ಷಗಾನ ಹಾಗೂ ಕಲೆಯ ವಿವಿಧ ಕ್ಷೇತ್ರದಲ್ಲಿ ವಿಶೇಷ ತರಬೇತಿ ನೀಡುವ ಹಾಗೂ ಅವಕಾಶ ವಂಚಿತ ನೈಜ ಪ್ರತಿಭೆಗಳಿಗೆ ಮಾರ್ಗದರ್ಶನ ನೀಡಿ ತನ್ಮೂಲಕ ಸೂಕ್ತ ವೇದಿಕೆಗಳಲ್ಲಿ ಅವಕಾಶ ಕಲ್ಪಿಸಿ ಅವರುಗಳಲ್ಲಿ ಅಡಗಿರುವ ಪ್ರತಿಭೆ ಹೊರಹೊಮ್ಮಲು ಅವಕಾಶ ಮಾಡಿಕೊಡುವ ಸದುದ್ದೇಶದಿಂದ ನಾಡಿನ ಹಿರಿಯ ಸಂಗೀತಗಾರರ ಹಾಗೂ ಹಿರಿಯ ಕವಿ – ಲೇಖಕರ ಹೃದಯಪೂರ್ವಕ ಸಹಕಾರದೊಂದಿಗೆ ಪ್ರಾರಂಭಗೊಂಡ ಸಂಸ್ಥೆ.

**'ಕೂಡ್ಲು ಶ್ಯಾನುಭೋಗ ಸಂಗೀತ ಟ್ರಸ್ಟ್ (ರಿ.)' ವಿಶಿಷ್ಟ, ವಿಭಿನ್ನ ಹಾಗೂ ವಿನೂತನ ರೀತಿಯಲ್ಲಿ ಕಾರ್ಯಕ್ರಮ ಆಯೋಜಿಸುವ ನಮ್ಮ ಸಂಸ್ಥೆ ಶನಿವಾರ 18–03–2023ರಂದು ಬೆಂಗಳೂರು ನಗರದ ಕೋಣನಕುಂಟೆಯಲ್ಲಿರುವ ಶ್ರೀ ಶ್ರೀನಿಧಿ ಶ್ರೀನಿವಾಸ ದೇವಸ್ಥಾನದ ರಂಗಮಂಟಪದಲ್ಲಿ 'ರಸತರಂಗ – ಸಂಸ್ಕೃತಿ ಸಂಭ್ರಮ' ಎಂಬ ಕಾರ್ಯಕ್ರಮ ಹಮ್ಮಿಕೊಂಡಿತ್ತು. ನಾಡಿನ ಹೆಸರಾಂತ ಗಾಯಕ ಶ್ರೀ ಶಶಿಧರ ಕೋಟೆ ಅವರು ದಾಸವಾಣಿ ಕಾರ್ಯಕ್ರಮ ನಡೆಸಿಕೊಟ್ಟರು.**

ಕಾರ್ಯಕ್ರಮವನ್ನು ಹಿರಿಯ ಶಿಕ್ಷಣತಜ್ಞ ಡಾ| ಕೆ. ಎಸ್. ಸಮೀರ ಸಿಂಹರವರು ಉದ್ಘಾಟಿಸಿದರು. ಡಾ| ಕೆ. ಎಸ್. ಸಮೀರ ಸಿಂಹರವರು ಸಂಗೀತದಲ್ಲಿ ಒಂದು ಮಹತ್ತರವಾದ ಶಕ್ತಿ ಇದೆ, ದೈಹಿಕವಾಗಿ ಹಾಗೂ ಮಾನಸಿಕವಾಗಿ ಸದೃಢಗೊಳಿಸುವ ಕಲೆ ಇದಾಗಿದೆ. ಇಂದಿನ ಪೀಳಿಗೆಯವರು ತಮ್ಮ ಮನಸ್ಸಿನ ಒತ್ತಡ ಕಡಿಮೆ ಮಾಡಲು ಸಂಗೀತವನ್ನು ಕಲಿಯುತ್ತಿದ್ದಾರೆ. ಅದೇ ಕಲಿಕೆಯನ್ನು ತಾಳ್ಮೆ, ಶ್ರದ್ಧೆಯಿಂದ ಸಾಧನೆ ಮಾಡಿದರೆ ಖಂಡಿತ ಯಶಸ್ಸು ಸಿಗುತ್ತದೆ ಮುಂದೆ ಅವರೇ ಕಲಾವಿದರಾಗುತ್ತಾರೆ ಎಂದು ತಿಳಿಸಿದರು.

**ದಾಸವಾಣಿ :** ಗಾಯಕ ಶ್ರೀ ಶಶಿಧರ ಕೋಟೆ ಮತ್ತು ತಂಡದವರ ದಾಸವಾಣಿ ಕಾರ್ಯಕ್ರಮ ನೆರೆದಿದ್ದ ಕಲಾರಸಿಕರನ್ನು ಗಂಧರ್ವ ಲೋಕಕ್ಕೆ ಕೊಂಡೊಯ್ಯಿತು. ವೆಂಕಟರಮಣನೆ ಬಾರೋ, ಭಾಗ್ಯದ ಲಕ್ಷ್ಮೀ ಬಾರಮ್ಮ, ಏಸು ಕಾಯಂಗಳ, ಮಧುಕರ ವೃತ್ತಿ ಎನ್ನದು, ಬಂದನೇನೆ ರಂಗ ಮುಂತಾದ ದಾಸರಪದಗಳು ಜನರನ್ನು ಮಂತ್ರಮುಗ್ಧಗೊಳಿಸಿತು. ಕೀಬೋರ್ಡ್‌ನಲ್ಲಿ ಶ್ರೀ ಶಿವಾನಂದ ಜೋಯಿಸ್, ಮ್ಯಾಂಡೋಲಿನ್‌ನಲ್ಲಿ ಶ್ರೀ ಕಾರ್ತಿಕ್, ತಬಲಾದಲ್ಲಿ ಶ್ರೀ ಅರುಣ್ ಕುಮಾರ್, ರಿದಂಪ್ಯಾಡ್‌ನಲ್ಲಿ ಶ್ರೀ ವೈಷ್ಣವ ರಾವ್ ಸಹಕರಿಸಿದರು. ಕೂಡ್ಲು ಶ್ಯಾನುಭೋಗ ಸಂಗೀತ ಟ್ರಸ್ಟ್‌ನ ಅಧ್ಯಕ್ಷೆ ಶ್ರೀಮತಿ ವೃಂದಾ ಎಸ್. ರಾವ್ ಉಪಸ್ಥಿತರಿದ್ದರು.

**ಯಕ್ಷಗಾನ ತಾಳಮದ್ದಳೆ :** ಶ್ರೀರಾಮನವಮಿ ಪ್ರಯುಕ್ತ ನಡೆದ ಈ ಕಾರ್ಯಕ್ರಮವನ್ನು ದಕ್ಷಿಣ ಕನ್ನಡ ಜಿಲ್ಲೆಯ 'ಯಕ್ಷ ಮಂಜುಳಾ' ಮಹಿಳಾ ಯಕ್ಷಗಾನ ತಂಡದವರು ಬಲಿಪ ನಾರಾಯಣ ಭಾಗವತರ 'ಇಂದ್ರಜಿತು ಕಾಳಗ' ಪ್ರಸಂಗವನ್ನು ನಡೆಸಿಕೊಟ್ಟರು. ಶ್ರೀರಾಮನಾಗಿ ಅರುಣಾ ಸೋಮಶೇಖರ್ – ಲಕ್ಷ್ಮಣನಾಗಿ ಶ್ರೀಮತಿ ಶೈಲಜಾ ಶ್ರೀಕಾಂತ್ ರಾವ್ – ಸೀತೆಯಾಗಿ, ಶ್ರೀಮತಿ ಅನುಪಮಾ ಪ್ರಭಾಕರ್ ಅಡಿಗ– ಹನುಮಂತನಾಗಿ, ಶ್ರೀಮತಿ ಪೂರ್ಣಿಮಾ ಪ್ರಭಾಕರ್ ರಾವ್ – ಇಂದ್ರಜಿತು ಪಾತ್ರದಲ್ಲಿ ಶ್ರೀಮತಿ ಪೂರ್ಣಿಮಾ ಪ್ರಶಾಂತ್ ಶಾಸ್ತ್ರೀ ಅರ್ಥಧಾರಿಗಳಾಗಿದ್ದರು. ಡಾ. ಪುರುಷೋತ್ತಮ ಭಟ್ ನಿಡುವಜೆ ಭಾಗವತಿಕೆ, ಶ್ರೀ ರವಿ ಅಲೆವೂರಾಯ ಚಕ್ರತಾಳದಲ್ಲಿ, ಶ್ರೀಮತಿ ಅಪೂರ್ವ ಅಶ್ವಿನ್ ಚೆಂಡೆಯಲ್ಲಿ ಹಾಗೂ ಶ್ರೀ ಕೌಶಲ್ ರಾವ್ ಮದ್ದಳೆಯಲ್ಲಿ ಸಹಕರಿಸಿದರು. ಸಿಲಿಕಾನ್ ಸಿಟಿ ಕಾಲೇಜಿನ ಪ್ರಾಂಶುಪಾಲೆ ಡಾ. ಕೀರ್ತಿ ಬದಿಯಡ್ಕ, ಕೂಡ್ಲು ಶ್ಯಾನುಭೋಗ ಸಂಗೀತ ಟ್ರಸ್ಟ್‌ನ ಅಧ್ಯಕ್ಷೆ ಶ್ರೀಮತಿ ವೃಂದಾ ಎಸ್. ರಾವ್, ಕಾರ್ಯದರ್ಶಿ ಶ್ರೀ ವೈಷ್ಣವ ರಾವ್ ಉಪಸ್ಥಿತರಿದ್ದರು.


ಪತ್ರಿಕೆಗೆ ಶುಭ ಬಯಸುವ–

ಶ್ರೀಮತಿ ಕುಸುಮಾ ನವೀನ್ ಕುಮಾರ್ ಮಂಗಳೂರು
ಶ್ರೀಮತಿ ರೇಷ್ಮ ವಸಂತ ಕುಮಾರ್, ಶ್ರೀ ಅನೀಶ್ ರಾವ್ ಉಡುಪಿ
ಶ್ರೀಮತಿ ಸುಷ್ಮ ಶಿವಾನಂದ ರಾವ್, ಶ್ರೀ ಅಂಜನ್ ರಾವ್ ದುಬೈ




Prop. : P. Srikanth Rao
Mobile : 9343361618
M/s. SAMARPAN
HOUSE OF STATIONERY
"Vijaya Nivas", Opp. Pio Mall
Bejai Church Road, Mangalore - 4

Phone : 0824 - 2440110, 2213946
VISHRAM MOTORS (P.) LTD.
No. 4, Kodialbail Church Building
K. S. Rao Road, MANGALORE - 575 003
Authorised Dealers for :
Vijai Super GP 150 &
Vikram 3 Wheelers (Petrol & Diesel)

॥ ಶ್ರೀ ಚಂದ್ರಶೇಖರ ಮಹಾಗಣಪತಯೇ ನಮಃ ॥

**ದಕ್ಷಿಣಾಮ್ನಾಯ ಶ್ರೀ ಶೃಂಗೇರಿ ಶಾರದಾಪೀಠಾಧೀಶ್ವರರುಗಳ ಪರಮಾನುಗ್ರಹ ಪುರಸ್ಸರ ಆಶೀರ್ವಾದಗಳಿಂದ**

## ಭಗವದ್ಭಕ್ತರಲ್ಲಿ ವಿಜ್ಞಾಪನೆ

ದ. ಕ. ಜಿಲ್ಲೆ ಮೂಡಬಿದಿರೆ ತಾಲೂಕಿನ ಪ್ರಾಂತ್ಯ ಗ್ರಾಮದ ಶ್ರೀ ಚಂದ್ರಶೇಖರ ದೇವಾಲಯವು ಪುರಾತನ ಶಿವ ದೇವಾಲಯಗಳಲ್ಲಿ ಪ್ರಧಾನವಾದುದು. ಚೌಟ ಅರಸರ ಪ್ರಧಾನಿ ದೊಡ್ಡಮನೆ ಮನೆತನದವರು ಆರಾಧಿಸಿ, ಆಡಳಿತ ನಡೆಸಿಕೊಂಡು ಬರುತ್ತಿದ್ದ ಶ್ರೀ ಚಂದ್ರಶೇಖರ ದೇವಾಲಯವು ಸುಮಾರು 750 ವರ್ಷ ಪುರಾತನ ಶಿವ ದೇವಾಲಯ ಎಂದು 1987ರಲ್ಲಿ ದೇವಾಲಯದಲ್ಲಿ ನಡೆಸಿದ್ದ ಅಷ್ಟಮಂಗಲ ಪ್ರಶ್ನೆಯಲ್ಲಿ ತಿಳಿದು ಬಂದಿರುತ್ತದೆ.

**ಅಷ್ಟಮಂಗಲ ಪ್ರಶ್ನೆಯಲ್ಲಿ ತಿಳಿದು ಬಂದ ಇತರ ವಿಚಾರಗಳು :**

ಸಾಮಾನ್ಯವಾಗಿ ಶಿವ ದೇವಾಲಯದ ಮುಂಭಾಗದಲ್ಲಿ ಪುಷ್ಕರಿಣಿ ಇರುತ್ತದೆ. ಆದರೆ ಇಲ್ಲಿ ದೇವಾಲಯದ ಹಿಂಭಾಗದಲ್ಲಿ ಇದೆ. ಈ ಪುಷ್ಕರಿಣಿಯ ಈಶಾನ್ಯ ಭಾಗದಲ್ಲಿರುವ ಬಾವಿಯಿಂದಲೇ ಅರ್ಚಕರು ದೇವರಿಗೆ ಪವಿತ್ರ ಜಲವನ್ನು ತಂದು ಅಭಿಷೇಕ ಮಾಡಬೇಕು. ಕಾರಣ ಈ ಪವಿತ್ರ ಜಲವು ಗಂಗೆಯಷ್ಟೇ ಪವಿತ್ರ ಹಾಗೂ ವಿಶೇಷವಾಗಿ ಚರ್ಮರೋಗ ನಿವಾರಣೆ ಮಾಡುವ ಗುಣವನ್ನು ಹೊಂದಿದೆ.

ಮೂಡಬಿದಿರೆ ಪ್ರಾಂತ್ಯ ಗ್ರಾಮಕ್ಕೆ ಈ ದೇವಾಲಯವು ಪ್ರಧಾನವಾಗಿದ್ದು ಮೂಡಬಿದಿರೆಯ ಪುರಾಣ ಪ್ರಸಿದ್ಧ ಹದಿನೆಂಟು ದೇವಾಲಯಗಳು ಹಾಗೂ ಹದಿನೆಂಟು ಕೆರೆಗಳಲ್ಲಿ ಇದು ಪ್ರಧಾನವಾದುದು. ಈ ಪುಷ್ಕರಿಣಿಯನ್ನು ಅಭಿವೃದ್ಧಿಪಡಿಸಿದಲ್ಲಿ ಇಡೀ ಗ್ರಾಮ ಹಾಗೂ ಊರಿಗೆ ಸಂಪತ್ಸಮೃದ್ಧಿ, ಒಳಿತು ಉಂಟಾಗಲಿದೆ ಎಂದು ಹೇಳಿದರು.

ಪ್ರಶ್ನೆಯಲ್ಲಿ ತಿಳಿದು ಬಂದಿರುವಂತೆ ಹಾಗೂ ಗ್ರಾಮಸ್ಥರ ಒತ್ತಾಸೆಯಂತೆ ಪ್ರಸ್ತುತ ಜೀರ್ಣಾವಸ್ಥೆಯಲ್ಲಿರುವ ಈ ಪುಷ್ಕರಿಣಿಯನ್ನು ನವೀಕರಿಸಲು ನಿಶ್ಚಯಿಸಲಾಗಿದೆ. ಅದಕ್ಕಾಗಿ ಸೇವಾ ಸಮಿತಿಯನ್ನು ರಚಿಸಿದ್ದು, ಈ ಪುಣ್ಯಕಾರ್ಯಕ್ಕೆ ತಮ್ಮೆಲ್ಲರ ತನು, ಮನ, ಧನ ಸಹಾಯವನ್ನು ಕೋರುತ್ತಿದ್ದೇವೆ.

ಆಸಕ್ತ ಭಗವದ್ಭಕ್ತರು ನೇರವಾಗಿ ಮೂಡಬಿದಿರೆ ಶ್ರೀ ಸುಬ್ರಹ್ಮಣ್ಯ ಸಹಕಾರ ಸಂಘದ **ಎಸ್. ಬಿ. ಖಾತೆ ಸಂಖ್ಯೆ 309** ಅಥವಾ **ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾದ UBIN0905984, A/c. No. 059821010000038**ಗೆ ನೇರವಾಗಿ ಹಣ ಸಂದಾಯ ಮಾಡಿ. ದಯವಿಟ್ಟು ವಿವರವನ್ನು 7483566569 ಅಥವಾ 9008238599ಗೆ ವಾಟ್ಸಪ್ ಮಾಡಲು ವಿನಂತಿ.

**ರತ್ನಾಕರ ಭಟ್,** ಆನುವಂಶಿಕ ಅರ್ಚಕರು
7483566569

**ಆನುವಂಶಿಕ ಆಡಳಿತ ಮೊಕ್ತೇಸರರು**

***ಶ್ರೀ ಚಂದ್ರಶೇಖರ ದೇವಸ್ಥಾನ, ದೊಡ್ಡಮನೆ ರಸ್ತೆ, ಮೂಡುಬಿದಿರೆ***


ಪತ್ರಿಕೆಗೆ ಶುಭ ಬಯಸುವ–



**ಶ್ರೀ ಕಾಂತಾವರ ಜಯಪ್ರಕಾಶ್**
**ಮತ್ತು ಶ್ರೀಲತಾ ಹಾಗೂ**
**ತನ್ವಿ, ನಿವೇದ, ಧೃತಿ ಮತ್ತು ಧ್ರುವ್**



ಪತ್ರಿಕೆಗೆ ಶುಭ ಬಯಸುವ–



**ಶ್ರೀ ಸೋಮಶೇಖರನ್**
**ಮತ್ತು**
**ಶ್ರೀಮತಿ ಅರುಣಾ ಸೋಮಶೇಖರನ್**
**ಚಿಲಿಂಬಿ, ಮಂಗಳೂರು**


## ಸಹಾಯ

**ತಾಯಿಗೆ ಮಾಡಿದ ಸಹಾಯ ಅದು ಸಹಾಯವಲ್ಲ**
**ಅದು ನಿನ್ನ ಋಣ.**

**ತಂದೆಗೆ ಮಾಡಿದ ಸಹಾಯ ಅದು ಸಹಾಯವಲ್ಲ**
**ಅದು ನಿನ್ನ ಭಾಗ್ಯ.**

**ಶಿಕ್ಷಕರಿಗೆ ಮಾಡಿದ ಸಹಾಯ ಅದು ಸಹಾಯವಲ್ಲ**
**ಅದು ನಿನ್ನ ಪುಣ್ಯ.**

**ಸಹೋದರನಿಗೆ ಮಾಡಿದ ಸಹಾಯ ಅದು ಸಹಾಯವಲ್ಲ**
**ಅದು ನಿನ್ನ ಕರ್ತವ್ಯ.**

**ಸಹೋದರಿಗೆ ಮಾಡಿದ ಸಹಾಯ ಅದು ಸಹಾಯವಲ್ಲ**
**ಅದು ನಿನ್ನ ಜವಾಬ್ದಾರಿ.**

**ಸಮಾಜಕ್ಕೆ ಮಾಡಿದ ಸಹಾಯ ಅದು ಸಹಾಯವಲ್ಲ**
**ಅದು ನಿನ್ನ ಹಕ್ಕು.**

**ಮಡದಿಗೆ ಮಾಡಿದ ಸಹಾಯ ಅದು ಸಹಾಯವಲ್ಲ**
**ಅದು ನಿನ್ನ ಪ್ರೀತಿ.**

**ಪ್ರಾಣಿ ಪಕ್ಷಿಗಳಿಗೆ ಮಾಡಿದ ಸಹಾಯ ಅದು ಸಹಾಯವಲ್ಲ**
**ಅದು ನಿನ್ನ ಮಾನವೀಯತೆ.**

**ಹಸಿದವರಿಗೆ, ಅನಾಥರಿಗೆ ಮಾಡಿದ ಸಹಾಯ ಅದು ಸಹಾಯವಲ್ಲ**
**ಅದು ನಿನ್ನ ಪೂರ್ವ ಜನ್ಮದ ಪುಣ್ಯ.**

– ಅನಾಮಿಕ


ಪತ್ರಿಕೆಗೆ ಶುಭ ಬಯಸುವ–



**ಶ್ರೀ ನಾಗರಾಜ್ ಶರ್ಮ**
**ಹಾಗೂ**
**ಶ್ರೀಮತಿ ಆರತಿ ಶರ್ಮ**
'ಶರ್ಮ', ನಾಗನಕಟ್ಟೆ ಹತ್ತಿರ, ಮುಂಡಾನ, ಕದ್ರಿ ಕಂಬಳ ರಸ್ತೆ
ಮಂಗಳೂರು - 575 002 ✆ : 9880258216



ಪತ್ರಿಕೆಗೆ ಶುಭ ಬಯಸುವ –

**ಇನ್ನ ಶ್ರೀನಿವಾಸ ರಾವ್ ಹಾಗೂ**
**ಶ್ರೀಮತಿ ಪುಷ್ಪಾವತಿ ಶ್ರೀನಿವಾಸ ರಾವ್**
**ಮತ್ತು ಕುಟುಂಬ**
ಶ್ರೀ ಗಣೇಶ ಕೃಪಾ, ಪೃಥ್ವೀ ಲೇಔಟ್, ಕೂಳೂರು, ಮಂಗಳೂರು - 575 013



**PREETHIKA AUTOMOBILES**
✆ 2493633 9845851573
*Wholesale & Retail Dealers in :*
***2 & 3 WHEELERS, SPARES & ACCESSORIES***
**KARANGALPADY, MANGALORE - 575 003**
***Dealers in :***
**Minda Switches, M. K. Products, Swiss Auto Products, Power Coils**

# ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ಜಗದ್ಗುರುಗಳ ವರ್ಧಂತ್ಯುತ್ಸವ ಹಾಗೂ ಶ್ರೀ ರಾಮನವಮಿ ಕಾರ್ಯಕ್ರಮ





ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ತಾ. **4-4-2023**ನೇ ಮಂಗಳವಾರ ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳ ವರ್ಧಂತ್ಯುತ್ಸವ ಹಾಗೂ ಶ್ರೀ ರಾಮನವಮಿ ಕಾರ್ಯಕ್ರಮಗಳನ್ನು ಶ್ರದ್ಧೆ ಹಾಗೂ ಭಕ್ತಿಯಿಂದ ಆಚರಿಸಲಾಯಿತು. ಬೆಳಗ್ಗೆ ನಡೆದ ಗಣಹೋಮದ ಯಜಮಾನರಾಗಿ ಶ್ರೀ ಶ್ರೀನಿವಾಸ ರಾವ್ ಮತ್ತು ಶ್ರೀಮತಿ ಪುಷ್ಪಾವತಿ ದಂಪತಿಗಳು ಭಾಗವಹಿಸಿದರು. ಶ್ರೀ ಶಾರದಾಂಬ ಭಜನಾ ಮಂಡಳಿಯಿಂದ ಭಜನಾ ಕಾರ್ಯಕ್ರಮ ನಡೆಯಿತು. ಬಳಿಕ ಶ್ರೀರಾಮ ದೇವರಿಗೆ ಕಲಶಾಭಿಷೇಕ ಮತ್ತು ಕಲ್ಪೋಕ್ತ ಪೂಜೆಯನ್ನು ಶ್ರೀ ಸೋಮಶೇಖರ್ ಮತ್ತು ಶ್ರೀಮತಿ ಅರುಣಾ ದಂಪತಿಗಳು ನಡೆಸಿದರು. ಶ್ರೀ ಸತ್ಯನಾರಾಯಣ ಪೂಜೆಯ ಯಜಮಾನರಾಗಿ ಶ್ರೀ ಸಂತೋಷ್ ಯು. ಮತ್ತು ಶ್ರೀಮತಿ ರಜನಿ ದಂಪತಿಗಳು ಸಹಕರಿಸಿದರು. ಶ್ರೀ ಸುಬ್ರಹ್ಮಣ್ಯ ಸಭಾದ ನಿರ್ದೇಶಕರಾದ ಶ್ರೀ ಉದಯ ಕುಮಾರ್ ಪಿ. ಗುರುಗಳ ಗುಣಗಾನ ಮಾಡಿದರು. ಧಾರ್ಮಿಕ ವಿಧಿವಿಧಾನಗಳನ್ನು ಪಾವಂಜೆ ಶ್ರೀ ಸುಬ್ರಹ್ಮಣ್ಯ ಭಟ್ ಮತ್ತು ಶ್ರೀ ಅರವಿಂದ್ ಶರ್ಮ ನಡೆಸಿಕೊಟ್ಟರು. ಶ್ರೀ ಸಭಾದ ಮಹಿಳಾ ವೇದಿಕೆ ಅಧ್ಯಕ್ಷೆ ಶ್ರೀಮತಿ ಕುಸುಮ ನವೀನ್, ಪದಾಧಿಕಾರಿಗಳಾದ ಶ್ರೀಮತಿ ಸ್ನೇಹಲತಾ ದಿವಾಕರ್, ಶ್ರೀಮತಿ ಭುವನಾ ನಾಗರಾಜ್ ವ್ಯವಸ್ಥೆಗಳಲ್ಲಿ ಸಹಕರಿಸಿದರು. ಶ್ರೀ ಸಭಾದ ಕೋಶಾಧಿಕಾರಿ ಶ್ರೀ ಪಿ. ಶ್ರೀಕಾಂತ್ ರಾವ್ ಸ್ವಾಗತಿಸಿ, ವಂದಿಸಿದರು.





ಚಿತ್ರ : ಶ್ರೀ ರಘುವೀರ್ ಪೆರ್ಡೂರ್





3,4,5 & 6 BHK Luxury homes at the heart of Mangalore

**Live the vacation life!**

Bookings open now
**8882 777 444**

SHIVABAGH
KADRI

Land Trades®
BUILDERS & DEVELOPERS
BUILDING TRUST,DELIVERING VALUE


Please log on to : www.subramanyasabha.com For all information on Subramanya Sabha and Address of Sthanika in Mangalore, Bantwal & Moodabidri

*Publisher :* Sri Harsha Kumar Kedige, President, Shree Subrahmanya Sabha (R.), Kudpi Padmanabhayya Gardens, Kodialbail, Mangalore - 3
*Editor :* Sri M. S. Raghunath Rao, Darbe, Puttur
*Printed at :* Rajesh Power Press, Darbe - 574 202, Puttur, D. K.